# ಕರ್ನಾಟಕ ಯಕ್ಷಗಾನ ಅಕಾಡೆಮಿ, ಬೆಂಗಳೂರು

www.karnatakayakshaganaacademy.com

ಪ್ರಾಯೋಜಕತ್ವದಲ್ಲಿ ಪ್ರಕಾಶಿತ

ಯಕ್ಷಗಾನ ಪ್ರಸಂಗ

# ನೈಮಿಷಾರಣ್ಯ

ಕವಿ

## ಶ್ರೀಧರ ಡಿ. ಎಸ್.

ಅಂತರಜಾಲ ಆವೃತ್ತಿ, ಸಹ-ಪ್ರಕಾಶಕರು ಮತ್ತು ಪ್ರಕಾಶನ ನಿರ್ವಾಹಕರು

ಯಕ್ಷವಾಹಿನಿ®

Email: yakshaprasangakosha@gmail.com

Blog: www.yakshaprasangakosha.com

ಆವೃತ್ತಿ ೧.೦ ನವೆಂಬರ್ ೩೦, ೨೦೧೯

ಯಕ್ಷವಾಹಿನಿ®

Email: yakshaprasangakosha@gmail.com, yakshavahini@gmail.com Blog: www.yakshaprasangakosha.com



## ಯಕ್ಷವಾಹಿನಿಯ ಯಕ್ಷಪ್ರಸಂಗಕೋಶ ಯೋಜನಾ ಸಮೂಹ

**ಗೌರವಾನ್ವಿತ ಸಂಪಾದಕ ಮಂಡಳಿ:**

ಶ್ರೀಧರ ಡಿ. ಎಸ್. (ಗೌರವಾಧ್ಯಕ್ಷರು), ಗಿಂಡೀಮನೆ ಮೃತ್ಯುಂಜಯ, ಡಾ. ಆನಂದರಾಮ ಉಪಾಧ್ಯ, ದಿನೇಶ ಉಪ್ಪೂರ, ಅಶೋಕ್ ಮುಂಗಳಿಮನೆ

**ಗೌರವಾನ್ವಿತ ಸಲಹಾ ಮಂಡಳಿ:**

ಅನಂತ ಪದ್ಮನಾಭ ಪಾಠಕ್, ವಿದುಷಿ ಸುಮಂಗಲಾ ರತ್ನಾಕರ್, ರಾಜಗೋಪಾಲ ಕನ್ಯಾನ, ಶಶಿರಾಜ ಸೋಮಯಾಜಿ, ಅವಿನಾಶ್ ಬೈಪಾಡಿತ್ತಾಯ, ಮಹೇಶ್ ಪದ್ಯಾಣ, ನಾರಾಯಣ ಹೆಬ್ಬಾರ್

**ಕಾರ್ಯಕಾರಿ ಮಂಡಳಿ:**

ರವಿ ಮಡೋಡಿ (ಯೋಜನಾಧ್ಯಕ್ಷ), ಡಾ. ಪ್ರದೀಪ್ ಸಾಮಗ (ಯೋಜನಾ ಕಾರ್ಯದರ್ಶಿ), ನಟರಾಜ ಉಪಾಧ್ಯ (ಯೋಜನಾ ಸಹಕಾರ್ಯದರ್ಶಿ), ಹರಿಕೃಷ್ಣ ಹೊಳ್ಳ, ಕಜೆ ಸುಬ್ರಹ್ಮಣ್ಯ ಭಟ್, ಲ ನಾ ಭಟ್, ಅಜಿತ್ ಕಾರಂತ್, ಇಟಗಿ ಮಹಾಬಲೇಶ್ವರ ಭಟ್, ಅಶ್ವಿನಿ ಹೊದಲ, ಶ್ರೀಕೃಷ್ಣ ಭಟ್ ಸುಣ್ಣಂಗುಳಿ, ವಿದ್ಯಾ ಹೆಗಡೆ ಕವಿತಾಸ್ಫೂರ್ತಿ, ಶಿವಕುಮಾರ ಬಿ. ಅಳಗೋಡು

**ಗೌರವಾನ್ವಿತ ಸ್ವಯಂಸೇವಕರು:**

ಗಣಪತಿ ಭಟ್ ಪಿ, ವಸುಮತಿ ಜಿ., ಅನಿತಾ ಎಂ. ಜಿ. ರಾವ್, ರಂಜನ ಭಟ್, ಶಶಿಕಲಾ ಮೂರ್ತಿ, ರಘುರಾಜ್ ಶರ್ಮ, ಚಂದ್ರು ಆಚಾರ್, ಸುಬ್ರಹ್ಮಣ್ಯ ಭಾಗವತ್, ಉಮೇಶ್ ಶಿರೂರು, ವೆಂಕಟೇಶ್ ಹೆಗಡೆ, ವೆಂಕಟೇಶ್ ವೈದ್ಯ, ಕೆ. ಗೋವಿಂದ ಭಟ್ ಬೆಂಗಳೂರು, ಸತೀಶ್ ಯಲ್ಲಾಪುರ, ಮಯೂರಿ ಉಪಾಧ್ಯಾಯ, ಶ್ರೀಕಾಂತ್ ನಾಯಕ್, ರವಿ ಕಾಮತ್ ಕುಮಟಾ, ರಾಮಕೃಷ್ಣ ಮರಾಠಿ, ಶ್ರೀಕಾಂತ್ ನಾಯಕ್, ರಘುರಾಜ್ ಶರ್ಮಾ

**ಸಹಕಾರ:**

**ಪ್ರಸಂಗ ಕವಿಗಳು:**

ಬಲಿಪ ನಾರಾಯಣ ಭಾಗವತ, ಹೊಸ್ತೋಟ ಮಂಜುನಾಥ ಭಾಗವತ, ಪ್ರೊ. ಎಮ್. ಎ. ಹೆಗಡೆ, ಡಾ. ಅಮೃತ ಸೋಮೇಶ್ವರ, ಶ್ರೀಧರ ಡಿ. ಎಸ್., ಎಂ. ಆರ್. ವಾಸುದೇವ ಸಾಮಗ, ಎಂ.ಆರ್. ಲಕ್ಷ್ಮೀನಾರಾಯಣ, ಮಧುಕುಮಾರ್ ಬೋಳೂರು, ಅಗರಿ ಭಾಸ್ಕರ ರಾವ್, ಅಂಬರೀಷ ಭಾರದ್ವಾಜ, ಶಿವಕುಮಾರ ಬಿ. ಅಳಗೋಡು, ದಿನೇಶ ಉಪ್ಪೂರ, ಗಿಂಡೀಮನೆ ಮೃತ್ಯುಂಜಯ, ಇಟಗಿ ಮಹಾಬಲೇಶ್ವರ ಭಟ್, ವಿಶ್ವವಿನೋದ ಬನಾರಿ, ಮಧೂರು ವೆಂಕಟಕೃಷ್ಣ

**ಕವಿಚರಿತ್ರೆ ಮತ್ತು ಪ್ರಸಂಗಯಾದಿ:**

ಡಾ. ಕಬ್ಬಿನಾಲೆ ವಸಂತ ಭಾರದ್ವಾಜ, ಡಾ. ಪಾದೇಕಲ್ಲು ವಿಷ್ಣುಭಟ್

**ಸಂಸ್ಥೆಗಳು:**

ಕರ್ನಾಟಕ ಯಕ್ಷಗಾನ ಅಕಾಡೆಮಿ & ಕನ್ನಡ ಮತ್ತು ಸಂಸ್ಕೃತಿ ಇಲಾಖೆ (ಕರ್ನಾಟಕ ಸರ್ಕಾರ), ಯಕ್ಷಗಾನ ಕಲಾರಂಗ, ಉಡುಪಿ, ಯಕ್ಷಸಿಂಚನ, ಬೆಂಗಳೂರು

**ಪ್ರಸಂಗ ಪುಸ್ತಕ ಒದಗಣೆ ಮತ್ತಿತರ:**

ಡಾ. ರಾಧಾಕೃಷ್ಣ ಉರಾಳ್, ಅಗರಿ ಭಾಸ್ಕರ ರಾವ್, ಗೋಪಾಲಕೃಷ್ಣ ಭಾಗವತ್, ಶ್ರೀಪಾದಗದ್ದೆ, ಮುರಳಿ ಶ್ರೇಣಿ, ಅನಂತ ದಂತಳಿಕೆ, ಗುರುನಂದನ್ ಹೊಸೂರು, ನಾರಾಯಣ ಶಾನುಭಾಗ, ನಾರಾಯಣ ಯಾಜಿ, ಶೇಷಗಿರಿಯಪ್ಪ, ಎಸ್ ಎಮ್ ಹೆಗಡೆ, ದಿವಾಕರ ಹೆಗಡೆ, ನಿತ್ಯಾನಂದ ಹೆಗಡೆ ಮೂರೂರು, ಶ್ರೀನಿಧಿ ಡಿ.ಎಸ್, ರವೀಂದ್ರ ಐತುಮನೆ, ಗುರುರಾಜ ಹೊಳ್ಳ ಬಾಯಾರು, ಸುರೇಶ್ ಹೆಗಡೆ ಬೆಳಸಲಿಗೆ, ಮನೋಹರ ಕುಂದರ್, ನಂದಳಿಕೆ ಬಾಲಚಂದ್ರ ರಾವ್, ರಘುರಾಮ್ ಮುಳಿಯ, ಸುಧಾ ಕಿರಣ್ ಅಧಿಕಶ್ರೇಣಿ, ಮಹಾಬಲಮೂರ್ತಿ ಕೊಡ್ಲೆಕೆರೆ, ಎ. ಎನ್. ಹೆಗಡೆ, ಮುರಳೀಧರ ಉಪಾಧ್ಯ

## ಯಕ್ಷವಾಹಿನಿ ಸಂಸ್ಥೆ

**ಗೌರವಾನ್ವಿತ ಸಲಹಾ ಮಂಡಳಿ:**

ಮಲ್ಪೆ ಲಕ್ಷ್ಮೀನಾರಾಯಣ ಸಾಮಗ (ಗೌರವಾಧ್ಯಕ್ಷರು), ಶ್ರೀಧರ ಡಿ. ಎಸ್., ಗಿಂಡೀಮನೆ ಮೃತ್ಯುಂಜಯ, ದಿನೇಶ ಉಪ್ಪೂರ, ಡಾ. ಪ್ರದೀಪ ಸಾಮಗ, ರಾಜಗೋಪಾಲ ಕನ್ಯಾನ, ಶಶಿರಾಜ ಸೋಮಯಾಜಿ, ಅನಂತ ಪದ್ಮನಾಭ ಪಾಠಕ್, ವಿದುಷಿ ಸುಮಂಗಲಾ ರತ್ನಾಕರ್, ಹರಿಕೃಷ್ಣ ಹೊಳ್ಳ, ಕಜೆ ಸುಬ್ರಹ್ಮಣ್ಯ ಭಟ್, ಲ ನಾ ಭಟ್, ರಾಘವೇಂದ್ರ ಮಯ್ಯ (ಲೆಕ್ಕಪತ್ರ ಪರಿಶೋಧಕರು)

**ವಿಶ್ವಸ್ಥ ಮಂಡಳಿ ಮತ್ತು ಕಾರ್ಯಕಾರಿ ಮಂಡಳಿ:**

ಡಾ. ಆನಂದರಾಮ ಉಪಾಧ್ಯ (ಅಧ್ಯಕ್ಷ), ನಟರಾಜ ಉಪಾಧ್ಯ (ಕಾರ್ಯದರ್ಶಿ), ರವಿ ಮಡೋಡಿ (ಖಜಾಂಚಿ)

**ಆರ್ಥಿಕ ಸಹಾಯ:**

ಅಶೋಕ್ ಕೊಡ್ಲಾಡಿ, ಗಿಂಡೀಮನೆ ಮೃತ್ಯುಂಜಯ, ನಟರಾಜ ಉಪಾಧ್ಯ

**ಪುಸ್ತಕ ಸಹಾಯ:**

ವಿದುಷಿ ಸುಮಂಗಲ ರತ್ನಾಕರ್, ಮಂಟಪ ಪ್ರಭಾಕರ ಉಪಾಧ್ಯ, ಡಾ. ಆನಂದರಾಮ ಉಪಾಧ್ಯ, ಗಿಂಡೀಮನೆ ಮೃತ್ಯುಂಜಯ, ನಟರಾಜ ಉಪಾಧ್ಯ

# ಮೊದಲ ಮಾತು

ಯಕ್ಷಗಾನ ಪ್ರದರ್ಶನಗಳಿಗೆ ಆಧಾರವಾಗಿರುವುದು ಪ್ರಸಂಗಸಾಹಿತ್ಯ. ಅದು ಯಕ್ಷಗಾನದ ಏಕಮಾತ್ರ ಲಿಖಿತಸಾಹಿತ್ಯವೂ ಹೌದು. ಅದರ ಅಭಾವದಲ್ಲಿ ಯಕ್ಷಗಾನದ ಅಡಿಪಾಯವೇ ಇಲ್ಲವಾಗುತ್ತದೆ. ಈಗ ಅಂದಾಜಿಸಿದಂತೆ ಇಂಥ ಪ್ರಸಂಗಕೃತಿಗಳ ಸಂಖ್ಯೆ ಐದು ಸಾವಿರಕ್ಕೂ ಮಿಕ್ಕಿದೆ. ವರ್ಷವರ್ಷವೂ ನೂರಾರು ಹೊಸಕೃತಿಗಳ ಸೇರ್ಪಡೆಯಾಗುತ್ತಲೇ ಇವೆ. ಆದರೆ ವಿಷಾದದ ಸಂಗತಿಯೆಂದರೆ ಸೂಕ್ತವಾದ ವಿತರಣಾ ವ್ಯವಸ್ಥೆಯಿಲ್ಲ. ಬೇಕೆಂಬುವರಿಗೆ ಪ್ರಸಂಗಗಳು ಲಭಿಸುತ್ತಿಲ್ಲ. ಅನೇಕ ಪ್ರಾಚೀನ ಅರ್ವಾಚೀನ ಕೃತಿಗಳಿಗೆ ಮುದ್ರಣ ಭಾಗ್ಯವಿಲ್ಲ. ಮುದ್ರಿತವಾದ ಕೃತಿಗಳ ಮಾರಾಟ ಮತ್ತಷ್ಟು ತೊಡಕಿನದು. ಹೀಗಾಗಿ ಈಗಾಗಲೇ ಅನೇಕ ಕೃತಿಗಳು ನಾಶವಾಗಿವೆ; ಮತ್ತಷ್ಟು ನಾಶವಾಗುತ್ತಿವೆ.

ಯಕ್ಷಗಾನ ಪ್ರಸಂಗಗಳು ಕನ್ನಡಸಾಹಿತ್ಯದ ಶ್ರೀಮಂತಿಕೆಯ ದ್ಯೋತಕಗಳು. ಕನ್ನಡದಲ್ಲಿ ಬೆಳೆದು ಬಂದ ಛಂದೋ ವೈವಿಧ್ಯದ ಸಾರವನ್ನೆಲ್ಲ ಹೀರಿಕೊಂಡು ಸುಪುಷ್ಟವಾಗಿ ಬೆಳೆದು ನಿಂತ ಈ ಸಾಹಿತ್ಯ ಪ್ರಕಾರವು ಕನ್ನಡಕ್ಕೊಂದು ಹೆಮ್ಮೆ. ಅದರ ಸಿದ್ಧಿ ಸಾಧನೆಗಳನ್ನು ಕುರಿತು ಗಂಭೀರವಾದ ಅಧ್ಯಯನದ ಆವಶ್ಯಕತೆಯಿದೆ. ಆದರೆ ಪ್ರಸಂಗಳ ಅಲಭ್ಯತೆ ಅಧ್ಯಯನಕ್ಕೆ ತೊಡಕಾಗಿದೆ. ಅಧ್ಯಯನಕ್ಕೆ ತೊಡಗುವವರಿಗೆ ಕೃತಿಗಳನ್ನು ಸಂಗ್ರಹಿಸುವುದೊಂದು ದೊಡ್ಡ ಸವಾಲಾಗಿದೆ. ಇದರಿಂದ ಯಕ್ಷಗಾನಕ್ಕೆ ತನ್ಮೂಲಕ ಕನ್ನಡ ಸಾಹಿತ್ಯಕ್ಕೆ ಹಾನಿಯಾಗುತ್ತಿದೆ.

ಇದನ್ನು ಮನಗಂಡ ಯಕ್ಷಗಾನ ಅಕಾಡೆಮಿಯು ಮಹತ್ವಾಕಾಂಕ್ಷೆಯ ಯೋಜನೆಯೊಂದನ್ನು ಕೈಗೊಂಡಿದೆ. ಅದೇ ಯಕ್ಷಗಾನ ಪ್ರಸಂಗಗಳ ಡಿಜಿಟಲೀಕರಣ. ಎಲ್ಲ ಪ್ರಸಂಗಗಳನ್ನು ಡಿಜಿಟಲೀಕರಣಕ್ಕೊಳಪಡಿಸಿ ಅಕಾಡೆಮಿಯ ವೆಬ್ಸೈಟಿನ ಮೂಲಕ ಆಸಕ್ತರಿಗೆ ಉಚಿತವಾಗಿ ತಲುಪಿಸುವ ವ್ಯವಸ್ಥೆ ಇದು. ಪ್ರಪಂಚದ ಯಾವುದೇ ಮೂಲೆಯಲ್ಲಿದ್ದರೂ ಬೇಕಾದ ಕೃತಿಯನ್ನು ಪಡೆದುಕೊಳ್ಳಲು ಯಕ್ಷಗಾನ ಪ್ರಸಂಗವನ್ನು ತೆಗೆದುಕೊಂಡು ಯಕ್ಷಗಾನ ಮಾಡುವವರಿಗೆ ಅತ್ಯಂತ ಅನುಕೂಲ. ಅಧ್ಯಯನಕ್ಕೂ, ಸಂಗ್ರಹಕ್ಕೂ ಅನುಕೂಲ ಹಾಗೂ ಯಕ್ಷಗಾನ ಪ್ರಿಯರಿಗೆ ಆಪ್ತವಾದೀತೆಂದು ಭಾವಿಸಿದ್ದೇವೆ.

ಇದನ್ನು ಕಾರ್ಯಗತಗೊಳಿಸಲು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ನೆರವು ದೊಡ್ಡದು. ಈ ಕಾರ್ಯಕ್ಕೆ ಯಕ್ಷವಾಹಿನಿ ಸಂಸ್ಥೆಯು ಕೈಜೋಡಿಸಿರುವುದು ಹಾಗೂ ಪುಸ್ತಕರೂಪದಲ್ಲಿ ಯಕ್ಷಗಾನ ಪ್ರಸಂಗವನ್ನು ಸಿದ್ಧಗೊಳಿಸಿಕೊಡುತ್ತಿದೆ. ಇದಕ್ಕೆ ಅಕಾಡೆಮಿಯ ಸರ್ವಸದಸ್ಯರ ಸಹಮತವಿದೆ. ಈ ಯೋಜನೆಯನ್ನು ಕೃತಿರೂಪಕ್ಕೆ ತರಲು ಸಹಕರಿಸಿದವರೆಲ್ಲರನ್ನೂ, ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಚಿವರನ್ನೂ, ಸರ್ಕಾರವನ್ನೂ ಹೃತ್ಪೂರ್ವಕವಾಗಿ ನೆನೆಯುತ್ತೇವೆ.



**ಪ್ರೊ. ಎಂ. ಎ. ಹೆಗಡೆ**
ಅಧ್ಯಕ್ಷರು
ಕರ್ನಾಟಕ ಯಕ್ಷಗಾನ ಅಕಾಡೆಮಿ



**ಎಸ್. ಎಚ್. ಶಿವರುದ್ರಪ್ಪ**
ರಿಜಿಸ್ಟ್ರಾರ್
ಕರ್ನಾಟಕ ಯಕ್ಷಗಾನ ಅಕಾಡೆಮಿ

## ಯಕ್ಷಪ್ರಸಂಗಕೋಶ ಯೋಜನೆ

ಕನ್ನಡ ಕಾವ್ಯದ ಚರಿತ್ರೆಯಲ್ಲಿ ಬಹುದೊಡ್ಡ ಸ್ಥಾನ ಪಡೆಯಬೇಕಾದ ಕೃತಿಗಳು ಅವಜ್ಞೆಗೊಳಗಾದುದನ್ನು ಗಮನಿಸಿ ಯಕ್ಷವಾಹಿನಿ ಸಂಸ್ಥೆಯಿಂದ ಯಕ್ಷಪ್ರಸಂಗಕೋಶದ ನಿರ್ಮಾಣವಾಗುತ್ತಿದೆ. ಯಕ್ಷಗಾನ ಪ್ರಸಂಗಗಳು ಪ್ರಯೋಗದ ಆಧಾರ ಪಠ್ಯಗಳು. ವ್ಯಾಖ್ಯಾನದ ಅಗತ್ಯವೂ ಇರುವುದರಿಂದ ಪ್ರಸಂಗಕವಿಗಳು ಬರೆದ ಗೀತೆಗಳು ಗುಣಮಟ್ಟದಲ್ಲೂ ಮೇಲಾಗಿದ್ದು ವಿದ್ವಾಂಸರಿಂದ ಮರಳಿ ಮರಳಿ ವ್ಯಾಖ್ಯಾನಕ್ಕೆ ಒಳಗಾಗಿವೆ. ಇಂತಹ ಪಠ್ಯಗಳನ್ನು ಖಿಲವಾಗದಂತೆ ಶಾಶ್ವತವಾಗಿ ಕಾಪಿಡುವುದೂ, ಜಾಗತಿಕ ಮಟ್ಟದಲ್ಲಿ ಲಭ್ಯವಾಗುವಂತೆ ಮಾಡುವುದೂ ನಮ್ಮ ಯಕ್ಷಪ್ರಸಂಗಕೋಶದ ಉದ್ದೇಶ. ಅದಕ್ಕೆ ಇಂದು ಅಂತರಜಾಲವೇ ಸೂಕ್ತ ಮಾಧ್ಯಮವಾಗಿದೆ. ಅಂತರಜಾಲದ ಮೂಲಕ ಪ್ರಕಟವಾದ ಪ್ರಸಂಗವೂ, ಅದನ್ನು ಸಿದ್ಧಪಡಿಸಿದ ಸಂಸ್ಥೆಯೂ ಇಡೀ ವಿಶ್ವದ ಮುಂದೆ ನಿಂತಿರುತ್ತದೆ ಎಂಬ ಅರಿವನ್ನು ಇಟ್ಟುಕೊಂಡೇ ಪ್ರಸಂಗಗಳನ್ನು ಸಿದ್ಧಪಡಿಸಿದ್ದೇವೆ.

ಪ್ರಸಂಗಗಳ ಪ್ರಸ್ತುತ ರೂಪದಲ್ಲಿ ಇರುವ ಮುದ್ರಣ ದೋಷಗಳು, ವ್ಯಾಕರಣ ದೋಷಗಳು, ಗ್ರಾಮ್ಯಶಬ್ದಗಳ ಬಳಕೆಯಿಂದಾದ ಶೈಥಿಲ್ಯ, ಶಬ್ದಗಳನ್ನು ಬಿಡಿಸಬೇಕಾಗಿದ್ದಲ್ಲಿ ಕೂಡಿಸಿ, ಕೂಡಿಸಬೇಕಾಗಿದ್ದಲ್ಲಿ ಬಿಡಿಸಿ ಉಂಟಾದ ದೋಷಗಳು, ಮಟ್ಟುಗಳ ಹೆಸರುಗಳಲ್ಲಿ ಕಣ್ತಪ್ಪಿನಿಂದ ನುಸುಳಿದ ದೋಷಗಳು, ಆಟ ಆಡಿಸುವಾಗ ಅನುಕೂಲಕ್ಕೆ ತಕ್ಕಂತೆ ಭಾಗವತರು ಸೇರಿಸಿಕೊಂಡ ಅನ್ಯ ಪ್ರಸಂಗಗಳ ಪದಗಳು ಮುದ್ರಿತರೂಪದಲ್ಲಿ ಸೇರಿಹೋಗಿರುವುದು, ಮುದ್ರಣವಾಗುವಾಗ ಕೆಲವು ಪದಗಳು ಬಿಟ್ಟುಹೋಗಿರುವುದು ಇವುಗಳೆಲ್ಲ ಕವಿಯು ಶ್ರಮವಹಿಸಿ ರಚಿಸಿದ ಸುಂದರ ರಚನೆಯಲ್ಲಿ ಅರ್ಥಾಂತರವನ್ನೋ, ಅಪಾರ್ಥವನ್ನೋ ಉಂಟುಮಾಡುವ ಸಾಧ್ಯತೆಯಿದೆ. ಈಗ ಪ್ರಕಟಿಸುತ್ತಿರುವ ಪ್ರಸಂಗಗಳನ್ನು ಸಾಧ್ಯವಾದ ಮಟ್ಟಿಗೆ ಈ ದೋಷಗಳಿಂದ ಮುಕ್ತಗೊಳಿಸಿದ್ದೇವೆ ಎಂಬ ಭರವಸೆ ನಮಗಿದೆ. ಒಟ್ಟಿನಲ್ಲಿ ನಮ್ಮ 'ಪ್ರಸಂಗಕೋಶ'ದಿಂದ ಪಡೆದುಕೊಂಡ ಪ್ರಸಂಗವು ಶುದ್ಧವಾಗಿರಬೇಕೆಂಬುದೇ ನಮ್ಮ ಅಪೇಕ್ಷೆ.



**ಶ್ರೀಧರ ಡಿ.ಎಸ್ .**
ಪ್ರಧಾನ ಸಂಪಾದಕರು



**ಗಿಂಡೀಮನೆ ಮೃತ್ಯುಂಜಯ**
ಸಹ ಸಂಪಾದಕರು



**ರವಿ ಮಡೋಡಿ**
ಯೋಜನಾಧ್ಯಕ್ಷರು

## ಯಕ್ಷವಾಹಿನಿ

ಯಕ್ಷಗಾನವು ಕನ್ನಡ ಸಂಸ್ಕೃತಿಯ ಕಿರೀಟದಲ್ಲಿ ರಾರಾಜಿಸುತ್ತಿರುವ ದೊಡ್ಡ ನವಿಲುಗರಿಯು. ಅಖಂಡ ಕರ್ನಾಟಕದ ಯಕ್ಷಗಾನ ಪರಂಪರೆಯ ಹಿರಿಮೆ ಗರಿಮೆಗಳನ್ನು ಹೆಚ್ಚಿಸುವತ್ತ ಅಂತರಜಾಲದ ಸಾಧ್ಯತೆಗಳನ್ನು ಸದುಪಯೋಗಪಡಿಸಿಕೊಳ್ಳುವುದೇ ಯಕ್ಷವಾಹಿನಿ ಸಂಸ್ಥೆಯ ಮುಖ್ಯ ಕಾಣ್ಕೆಯಾಗಿದೆ. ಯಕ್ಷಪ್ರಸಂಗಯಾದಿ ಮತ್ತು ಯಕ್ಷಪ್ರಸಂಗಕೋಶ ಇವೆರೆಡು ನಾವು ಈಗಾಗಲೇ ತೊಡಗಿಸಿಕೊಂಡಿರುವ ಪ್ರಾಥಮಿಕ ಯೋಜನೆಗಳು. ಈ ಯೋಜನೆಗಳಿಗೆ ಬೆನ್ನೆಲುಬಾಗಿ ನಮ್ಮೊಂದಿಗಿರುವ ಎಲ್ಲಾ ವಿದ್ವಾಂಸರು, ಪ್ರಸಂಗಕವಿಗಳು, ಸ್ವಯಂಸೇವಕರು, ಪ್ರಾಯೋಜಕರು ಹಾಗೂ ಎಲ್ಲಾ ರೀತಿಯ ಬೆಂಬಲ ಮತ್ತು ಸಹಾಯ ನೀಡುತ್ತಿರುವ ವಿಶ್ವವ್ಯಾಪಿ ಯಕ್ಷಪ್ರೇಮಿಗಳಿಗೆ ವಿನಮ್ರ ಧನ್ಯವಾದಗಳು. ಪ್ರಾಯೋಜಕತ್ವ ಹೆಚ್ಚಿದಂತೆ ನಮ್ಮ ಇನ್ನೂ ಅನೇಕ ಕನಸುಗಳು ಯೋಜನೆಗಳಾಗಿ ಅನಾವರಣಗೊಳ್ಳಲಿವೆ. ನಿಮ್ಮ ಹೆಚ್ಚುತ್ತಿರುವ ಸಹಕಾರ, ಸಹಾಯ, ಬೆಂಬಲ ಮತ್ತು ಆಶೀರ್ವಾದಕ್ಕೆ ನಾವು ಚಿರಋಣಿಗಳು.

**ಪ್ರೊ. ಮಲ್ಪೆ ಲಕ್ಷ್ಮೀನಾರಾಯಣ ಸಾಮಗ, ಗೌರವಾಧ್ಯಕ್ಷರು**

**ಡಾ. ಆನಂದರಾಮ ಉಪಾಧ್ಯ, ಕಾರ್ಯಾಧ್ಯಕ್ಷ ಮತ್ತು ವಿಶ್ವಸ್ಥ**

**ನಟರಾಜ ಉಪಾಧ್ಯ, ಕಾರ್ಯದರ್ಶಿ ಮತ್ತು ವಿಶ್ವಸ್ಥ**

**ರವಿ ಮಡೋಡಿ, ಖಜಾಂಚಿ ಮತ್ತು ವಿಶ್ವಸ್ಥ**

# ಸಾರಾಂಶ

**ಪ್ರಸಂಗ ವಿಧ:**

ಪೌರಾಣಿಕ

**ಆಧಾರ ಗ್ರಂಥ:**

ವರಾಹ ಪುರಾಣ

**ಭಾಷೆ:**

ಕನ್ನಡ

**ಹಿಂದಿನ ಪ್ರಕಾಶನಗಳ ವಿವರ:**

ಸದಾನಂದ ಅಸ್ರಣ್ಣ ಪ್ರಕಾಶನ, ಕಟೀಲು, ದಕ್ಷಿಣ ಕನ್ನಡ ಜಿಲ್ಲೆ

**ಹಕ್ಕುಸ್ವಾಮ್ಯ ವಿವರ:**

ಈ ಅಂತರಜಾಲ ಆವೃತ್ತಿಯು ವಿಶ್ವದಾದ್ಯಂತ ಉಚಿತವಾಗಿ ಹಂಚಲ್ಪಡುವುದೇ ಜಂಟಿ ಪ್ರಕಾಶಕರ ಘನ ಉದ್ದೇಶವು. ಈ ಆವೃತ್ತಿಯನ್ನು ಹೇಗಿದೆಯೋ ಹಾಗೆಯೇ ಸಮಗ್ರವಾಗಿ ಮುದ್ರಿಸಲು ಯಾ ಅಂತರಜಾಲದ ಮೂಲಕ ಉಚಿತವಾಗಿ ಹಂಚಲು ಯಾವುದೇ ಅಭ್ಯಂತರ ಇಲ್ಲ. ಮೂಲ ಪ್ರಕಾಶನಗಳ ಹಕ್ಕುಸ್ವಾಮ್ಯ ಹೇಗಿದೆಯೋ ಹಾಗೆಯೇ ಉಳಿದಿರುತ್ತದೆ.

**ಒಟ್ಟು ಪದ್ಯಗಳು:**

೨೧೯

**ಪಾತ್ರಗಳು:**

ಸುಪ್ರತೀಕ, ವಿದ್ಯುತ್ ಪ್ರಭಾ, ಕಾಂತಿಮತಿ, ಆತ್ರೇಯ ಮುನಿ, ದೇವೇಂದ್ರ, ಅಗ್ನಿ, ವಾಯು, ಯಮ, ದುರ್ಜಯ, ಸುದ್ಯುಮ್ನ, ನಾರದ, ವಿದ್ಯುತ್, ಸುವಿದ್ಯುತ್, ಹಂಸ, ನರ್ತಕಿಯರು (3), ಸುಕೇಶಿ, ಮಿಶ್ರಕೇಶಿ, ಹೋತೃ, ಸುಹೋತೃ, ಗೌರಮುಖ, ಮಹಾವಿಷ್ಣು, ವನಪಾಲಕರು, ಸೈನಿಕರು, ಕಿರಾತರು

**ಕಥಾಸಾರಾಂಶ:**

ಕಾಶಿಯ ಅರಸನಾದ ಸುಪ್ರತೀಕ ಧರ್ಮಾತ್ಮನಾಗಿ ಪ್ರಜಾ ಪಾಲನೆಯನ್ನು ಮಾಡುತ್ತಾ ರಾಜ್ಯ ಸಮೃದ್ಧವಾಗಿದ್ದೂ, ಪುತ್ರರಿಲ್ಲದ ಚಿಂತೆಯಿಂದ ತನ್ನ ಮಡದಿಯಾದ ವಿದ್ಯುತ್ ಪ್ರಭೆ ಹಾಗೂ ಕಾಂತಿಮತಿಯರಿರುವ ಅಂತಃಪುರಕ್ಕೆ ಆಗಮಿಸುತ್ತಾನೆ. ಪತ್ನಿಯರು ಪತಿಯ ಶೋಕಕಾರಣವನ್ನು ವಿಚಾರಿಸಿ, ಪುತ್ರಪ್ರಾಪ್ತಿಗೆ ಸಕಲ ಪುಣ್ಯಕರ್ಮಗಳನ್ನು ಎಸಗಿದರೂ ಫಲಕಾಣದ ಈ ಸ್ಥಿತಿಯಲ್ಲಿ, ಯತಿಗಳ ಸೇವೆಯೇ ಇನ್ನುಳಿದ ದಾರಿ ಎಂದು ಒಮ್ಮತದಿಂದ ಹೇಳುತ್ತಾರೆ. ಒಪ್ಪಿದ ಸುಪ್ರತೀಕ ರಾಜ್ಯವನ್ನು ಸಚಿವರ ವಶದಲ್ಲಿರಿಸಿ, ಸತಿಯರ ಜೊತೆಯಲ್ಲಿ ಚಿತ್ರಕೂಟದಲ್ಲಿರುವ ಆತ್ರೇಯರ ಆಶ್ರಮಕ್ಕೆ ಬರುತ್ತಾರೆ.

ಮುನಿಪ ಆತ್ರೇಯ ರಾಜದಂಪತಿಗಳನ್ನು ಸ್ವಾಗತಿಸಿ, ಕುಶಲ ವಿಚಾರ ಕೇಳಿದಾಗ, ಯತಿ ಸೇವೆಗೆ ಸನ್ನದ್ಧರಾಗಿ ಆಶ್ರಮಕ್ಕೆ ಬಂದುದನ್ನು ಸುಪ್ರತೀಕ ನಿವೇದಿಸುತ್ತಾನೆ. ಆಗ ಮುನಿಪತಿ ಅವರಲ್ಲಿ 'ನಿಮಗೆ ಆಶ್ರಮದ ವ್ಯವಸ್ಥೆಯೊಳಗೆ ಹೊಂದಿಕೊಂಡಿರುವುದು ಕಷ್ಟ' ಎಂದಾಗ ಸುಪ್ರತೀಕ 'ಅರಮನೆಗಿಂತ ಗುರುಮನೆ ಹಿರಿದೆಂದು ತಿಳಿದು ಬಂದ ನಮಗೆ ಪಾದಸೇವೆಗೆ ಅವಕಾಶ ನೀಡಿ' ಎಂದಾಗ ಮುನಿ ಆತ್ರೇಯ ಸಮ್ಮತಿಸುತ್ತಾನೆ.

ಸ್ವರ್ಗದಲ್ಲಿ ರಾಕ್ಷಸರ ಬಾಧೆ ಇಲ್ಲದ ಕಾಲದಲ್ಲಿ, ನೆಮ್ಮದಿಯಿಂದಿರುವ ಇಂದ್ರ ಭೂಸೌಂದರ್ಯ ಸವಿಯಲು ಐರಾವತವನ್ನೇರಿ ಹೊರಡುತ್ತಾನೆ. ಇತ್ತ ಆತ್ರೇಯನು ಆಶ್ರಮದಲ್ಲಿ ಯತಿಸೇವಾ ನಿರತರಾದ ರಾಜದಂಪತಿಗಳ ನಿಸ್ಪೃಹ ಸೇವೆಗೆ ಒಲಿದು, ಮನದ ಕೊರಗನ್ನು ಏನು ಬೇಕು ಎಂದು ರಾಜನಲ್ಲಿ ಕೇಳಿ, ಕೊಡಲು ಸಿದ್ಧನಾಗಿ ಕಮಂಡಲುವನ್ನು ಎತ್ತುತ್ತಾನೆ. ಆಗ ಆಶ್ರಮದ ಸನಿಹಕ್ಕೆ ಐರಾವತವನ್ನು ಏರಿ ಬಂದ ಸುರಪನನ್ನು ಕಂಡು, ಸಂಭ್ರಮದಿಂದ ಸ್ವಾಗತಿಸುತ್ತಾನೆ. ಇಂದ್ರನು ಮುನಿಯ ಸ್ವಾಗತವನ್ನು ಅಹಂಕಾರದಿಂದ ಉಪೇಕ್ಷಿಸುತ್ತಾನೆ. ಇಂದ್ರನ ಈ ವರ್ತನೆ ಸರಿಯೇ ಎಂದು ಆತ್ರೇಯ ಪ್ರಶ್ನಿಸಿದಾಗ ಇಂದ್ರನು, ಸಾಮಾನ್ಯ ಮುನಿಗೇನು ಮನ್ನಣೆ? ನೀನೇನು ಬ್ರಹ್ಮರ್ಷಿಯೇ? ಎಂದು ಉತ್ತರಿಸುತ್ತಾನೆ. ಆಗ ಮುನಿ ವಿಪ್ರರೆಲ್ಲರೂ ಗೌರವಾರ್ಹರೆಂದು ತಿಳಿಹೇಳಿದರೆ, ದೊಡ್ಡ ದೊಡ್ಡ ಮುನಿಗಳ ಮಾನ್ಯತೆ ಪಡೆದ ತಾನು ಸಾಮಾನ್ಯ ಮಾನವಮುನಿಯನ್ನು ಮಾನಿಸಬೇಕಾಗಿಲ್ಲ ಎಂದು ಇಂದ್ರ ಪ್ರತಿನುಡಿಯುತ್ತಾನೆ. ಇದರಿಂದ ಮುನಿದ ಆತ್ರೇಯ, ಮಾನವರನ್ನು ಹೀಗಳೆದ ಇಂದ್ರನಿಗೆ ಧಾರಿಣೀಪತಿಯೋರ್ವನಿಂದಲೇ ಸೋಲಾಗಿ, ಸ್ವರ್ಗದ ಸಿರಿ ಕೈತಪ್ಪಲೆಂದು ಶಪಿಸುತ್ತಾನೆ. ಶಾಪವನ್ನೂ ಅವಗಣಿಸಿ ಇಂದ್ರ ಮುನ್ನಡೆಯುತ್ತಾನೆ. ಆತ್ರೇಯ ಆಗ ಹಸ್ತದಲ್ಲಿ ಮಂತ್ರಜಲ ಹಿಡಿದು ಸುಪ್ರತೀಕನನ್ನು ನೋಡಲು, ಆತ ಪುತ್ರರಿಲ್ಲದ ಕೊರತೆಯನ್ನು ನಿವೇದಿಸುತ್ತಾನೆ. ಆಗ ಆತ್ರೇಯ ಸರ್ವ ಮನುಕುಲವನ್ನು ಪಾಲಿಸುವ ಮಗನೋರ್ವ ಹಿರಿಸತಿಗೆ, ಪರಾಕ್ರಮಿಯಾದ ಇನ್ನೋರ್ವ ಸುತ ಕಿರಿಸತಿಗೆ ಉದಿಸುವನೆಂದು, ಅವರಿಗೆ ತಾನೇ ವಿದ್ಯಾದಾನ ಮಾಡುವುದಾಗಿ ಅನುಗ್ರಹಿಸುತ್ತಾನೆ.

ಪುರಕ್ಕೆ ಮರಳಿದ ಸುಪ್ರತೀಕನಿಗೆ, ಮುಂದೆ, ವಿದ್ಯುತ್ ಪ್ರಭೆಯಲ್ಲಿ ದುರ್ಜಯನೆಂಬ ಹಿರಿಸುತ, ಕಾಂತಿಮತಿಯಲ್ಲಿ ಸುದ್ಯುಮ್ನ ಎಂಬ ಕಿರಿಮಗ ಜನಿಸುತ್ತಾರೆ. ಬೆಳೆಯುತ್ತಿರುವಾಗ ದುರ್ಜಯನಲ್ಲಿ ಕ್ರೌರ್ಯ ಪ್ರವೃತ್ತಿ ಅಧಿಕವಾಗುತ್ತಿರುವುದನ್ನು ಗಮನಿಸಿ, ಚಿಂತಿಸಿ, ಮಕ್ಕಳೊಡನೆ ಆತ್ರೇಯನ ಆಶ್ರಮಕ್ಕೆ ತೆರಳುತ್ತಾನೆ. ಸುಪುತ್ರನಾಗಿ ಬಂದ ಅರಸನನ್ನು ಆತ್ರೇಯ ಗೌರವಿಸಲು, ಮಕ್ಕಳಾದುದಕ್ಕೆ ಅನುಗ್ರಹಿಸಿದ ಕೃತಜ್ಞತೆ ಹೇಳಿ, ದುರ್ಜಯನಲ್ಲಿ ತಾಮಸಿಕ ಪ್ರವೃತ್ತಿ ಅಧಿಕವಾಗುತ್ತಿರುವುದಕ್ಕೆ ಖೇದ ವ್ಯಕ್ತಪಡಿಸುತ್ತಾನೆ. ತನ್ನ ಅವಜ್ಞೆಯಿಂದಾದ ಈ ದುಷ್ಪರಿಣಾಮವನ್ನು ಅಂತರಂಗದಲ್ಲಿ ಅರಿತ ಆತ್ರೇಯ, ಸುಪ್ರತೀಕನ ಬಳಿ 'ತಾನು ಸುರಪನನ್ನು ಶಪಿಸಿದ ತಾಮಸ ಭಾವದಲ್ಲೇ ನಿನ್ನನ್ನನುಗ್ರಹಿಸಿದ ಪರಿಣಾಮ ಇದು.

ನನ್ನ ತಪದ ಬಲದಿಂದ ಅವನ ಸ್ವಭಾವವನ್ನು ತಿದ್ದುವೆ, ಚಿಂತಿಸದಿರು' ಎನ್ನುತ್ತಾನೆ. ರಾಜ ತನ್ನ ಸುತರನ್ನು ಗುರುವಿನಾಶ್ರಮದಲ್ಲಿ ವಿದ್ಯಾರ್ಜನೆಗೆ ನಿಯೋಜಿಸಿ ತೆರಳುತ್ತಾನೆ. ಗುರುವಾಗಿ ಮಕ್ಕಳನ್ನು ತಿದ್ದಿ‌ತೀಡಿ, ಸುಜ್ಞಾನವನ್ನಿತ್ತು ಹರಸಿ ಬೀಳ್ಕೊಡುತ್ತಾನೆ.

ಸುಪ್ರತೀಕನು ಪ್ರಬುದ್ಧನಾದ ದುರ್ಜಯನಿಗೆ ಪಟ್ಟಕಟ್ಟಿ, ಕಿರಿಯ ಸುದ್ಯುಮ್ನನನ್ನು ಸೇನಾಧಿಪತಿಯನ್ನಾಗಿಸಿ, ಸತಿಯರನ್ನು ಕೂಡಿಕೊಂಡು ಚಿತ್ರಕೂಟದೆಡೆ ತೆರಳಿ ವಾನಪ್ರಸ್ಥಿಯಾಗುತ್ತಾನೆ. ದುರ್ಜಯ, ತಮ್ಮನನ್ನು ಕೂಡಿಕೊಂಡು ತನ್ನ ದಕ್ಷತೆಯಿಂದ ಧರೆಯ ಸಪ್ತದ್ವೀಪಗಳನ್ನು ವಶಪಡಿಸಿ, ಸ್ವರ್ಗವನ್ನೂ ಗೆದ್ದು ವಿಜಯಯಾತ್ರೆ ಪೂರ್ಣಗೊಳಿಸಲು ಬಯಸುತ್ತಾನೆ. ತಮ್ಮನೂ ಇದಕ್ಕೊಪ್ಪುತ್ತಾನೆ. ನಾರದರು ಸ್ವರ್ಗವನ್ನು ಸೇರಿ ಇಂದ್ರನಿಗೆ ಮಾನವಾಧಿಪತಿಯ ಈ ಬಯಕೆಯ ಬಗ್ಗೆ ಹೇಳಿ ಎಚ್ಚರಿಸುತ್ತಾನೆ. ಆಗ ಇಂದ್ರನು ದುರ್ಜಯನನ್ನೆದುರಿಸುವ ಬಗೆಗೆ, ದಿಕ್ಪತಿಗಳ ಜೊತೆ ಸಮಾಲೋಚನೆ ಮಾಡಿ, ಅವರ ಭರವಸೆಯನ್ನು ಪಡೆದು ದುರ್ಜಯನು ಪಡೆಸಹಿತನಾಗಿ ಬರುವ ಮಾರ್ಗದಲ್ಲಿ ಸುಮೇರು ಪ್ರಾಂತ್ಯಕ್ಕೆ ದೇವಸೈನ್ಯ ಸಹಿತ ಬಂದು ನಿಲ್ಲುತ್ತಾನೆ. ದುರ್ಜಯನು ಸ್ವರ್ಗಕ್ಕೆ ಸೇನಾ ಸಹಿತನಾಗಿ ಹೊರಡುವ ವೇಳೆ, ತನಗೆ ಪರಮಾಪ್ತನಾದ, ಸಕಲ ಕಲಾವಿದ ಹಂಸನೆಂಬವನನ್ನು ಕರೆದು, ನೀನು ನಿನ್ನವರ ಜೊತೆಗೂಡಿ ಕದನ ನಿರತರಾಗುವ ಸೇನಾ ವರ್ಗಕ್ಕೆ ಬಿಡುವಿನ ವೇಳೆ ಕಲಾಪ್ರದರ್ಶನದಿಂದ ಉತ್ತೇಜನ ನೀಡುತ್ತಿರು ಎಂದಾಗ, ಹಂಸನೂ ಇದನ್ನೊಪ್ಪಿ ಅವನ ಜೊತೆ ತೆರಳುತ್ತಾನೆ. ದೈತ್ಯಪತಿ ವಿದ್ಯುತ್ ಹಾಗೂ ಸೋದರ ಸುವಿದ್ಯುತ್ ಎಂಬವರು ದುರ್ಜಯನ ಸ್ವರ್ಗಲೋಕಾಭಿಗಮನವನ್ನು ಅರಿತು, ತಾವೂ ಈಗವರ ಜೊತೆ ಸೇರಿದರೆ ಮನ್ನಣೆ ಲಭ್ಯವಾದೀತೆಂಬ ಆಸೆಯಿಂದ, ದುರ್ಜಯನನ್ನು ಸಂಧಿಸಿ ಸ್ನೇಹ ಮುದ್ರೆ ತೋರುವರು. ದೈತ್ಯರನ್ನು ನಂಬದೆ ತಮ್ಮನ ಮೂಲಕ ವಿಚಾರಿಸಿ ಅವರು ಹಿಂದೆ ದೇವವಿರೋಧ ಮಾಡಿ ಸೋತು ನೆಲೆಯಿಲ್ಲದೆ ಸಂತ್ರಸ್ತರಾದವರೆಂದರಿತು, ಬರಮಾಡಿಕೊಂಡು ಸ್ನೇಹಹಸ್ತ ಚಾಚುತ್ತಾನೆ. ಅವರ ಜೊತೆಗೆ ಸ್ವರ್ಗದೆಡೆ ಸಾಗುತ್ತಾನೆ. ಸುಮೇರು ಪರ್ವತದಲ್ಲಿ ದೇವತೆಗಳು ದುರ್ಜಯನನ್ನು ಅಡ್ಡಗಟ್ಟಿದಾಗ ಸುರನರರಿಗೆ ಸಂಘರ್ಷ ಏರ್ಪಟ್ಟು, ದೇವತೆಗಳು ಸೋತು ಹಿಮ್ಮೆಟ್ಟುತ್ತಾರೆ.

ಸ್ವರ್ಗದ ಅಧಿಕಾರವನ್ನು ದುರ್ಜಯನು ದೈತ್ಯರ ವಶಕ್ಕಿತ್ತು ಮರಳುತ್ತಾನೆ. ಗೆದ್ದು ಮರಳುವಾಗ ಮಾರ್ಗಮಧ್ಯೆ, ಗಂಧಮಾದನ ಪರ್ವತ ಪ್ರದೇಶದಲ್ಲಿ ದುರ್ಜಯನು ಬಳಲಿದ ಸೇನೆಯ ಆಯಾಸ ನೀಗಲು ಗೆಳೆಯ ಹಂಸನಲ್ಲಿ ವೈನೋದಿಕ ಕಲಾಪ್ರದರ್ಶನ ಏರ್ಪಡಿಸಲು ಸೂಚಿಸುತ್ತಾನೆ. ಪ್ರಕೃತಿಯ ಮಡಿಲಲ್ಲಿ ಎಲ್ಲರೂ ವಿಹರಿಸುತ್ತಾರೆ. ಆಗ ಮುನಿಗಳಾದ ಹೋತ್ರ ಮತ್ತು ಸುಹೋತ್ರವಿನ ಮಗಳಂದಿರಾದ ಸುಕೇಶಿ, ಮಿಶ್ರಕೇಶಿಯರು ಸಖಿಯರ ಜೊತೆ ವನವಿಹಾರಕ್ಕೆ ಬರುತ್ತಾರೆ. ಜಲಕೇಳಿಯಾಡಿ, ವಿಹರಿಸುವಾಗ ದುರ್ಜಯನ ದೃಷ್ಟಿಗೆ ಬೀಳುತ್ತಾರೆ. ಅವರ ಸೌಂದರ್ಯವನ್ನು ಗೆಳೆಯ ಹಂಸನ ಬಳಿ ವರ್ಣಿಸಿ, ಅವನ ಹಿತವಚನ ಕೇಳಿ, ಅವರಿಗೆ ಸೋತು ಅವರ ಬಗ್ಗೆ ವಿಚಾರಿಸಲು ಮುಂದಾಗುತ್ತಾನೆ. ಯಾರೆಂದು ದುರ್ಜಯ ಕೇಳಲು ಅವರು ತಾವು ಮುನಿಸುತೆಯರೆಂದು ಹೇಳಿ, ತಮ್ಮ ಹೆಸರೇನೆಂದು ತಿಳಿಸಿ ಅರಸನ ಪರಿಚಯ ಕೇಳಲು, ಸ್ವರ್ಗಗೆದ್ದು ಬಂದ ತನ್ನ ಪರಿಚಯವನ್ನು ದುರ್ಜಯನು ಹೇಳಿ ಅವರೀರ್ವರನ್ನೂ ಹೊಂದುವ ಆಸೆ ಪ್ರಕಟಿಸುತ್ತಾನೆ. ಬಯಕೆಯರಿತು ನಾಚಿದ ತರುಣಿಯರು, ತಂದೆಯವರನ್ನು ಒಪ್ಪಿಸಿದರೆ ತಾವು ಈ ಭಾಗ್ಯ ಹೊಂದಲು ಸಿದ್ಧವೆಂದಾಗ, ತರುಣಿಯರು ಒಪ್ಪಿದ ಸಂಭ್ರಮದಿಂದ ಆಶ್ರಮಕ್ಕೆ ದುರ್ಜಯ ಹೊರಡಲು, ಹಂಸನು ಮುನಿಗಳ ಶಾಸ್ತ್ರ ನಿಷ್ಠೆಯ ಕುರಿತು ಎಚ್ಚರಿಸುತ್ತಾನೆ. ಋಷ್ಯಾಶ್ರಮಕ್ಕೆ ದುರ್ಜಯ ಬಂದು ರಾಜಕಾಣಿಕೆ ಒಪ್ಪಿಸಿ ಮಣಿದಾಗ, ಮುನಿಗಳಿಬ್ಬರೂ ದುರ್ಜಯನ ಬಗ್ಗೆ ಕೇಳಿ ತಿಳಿದವರಾದುದರಿಂದ ಬಂದ ಕಾರಣವೇನೆಂದು ಕೇಳಲು ಸುತೆಯರನ್ನು ವರಿಸುವ ಇಚ್ಛೆ ಪ್ರಕಟಿಸುತ್ತಾನೆ. ಇದನ್ನು ಕೇಳಿ ಸಂತೋಷ ಭರಿತರಾದ ಹೋತ್ರ ಮತ್ತು ಸುಹೋತ್ರಗಳು ತಮ್ಮ ಹಿನ್ನೆಲೆ ಹೇಳಿ, ಸಂತೋಷದಿಂದ ಸುತೆಯರನ್ನು ವಿವಾಹ ಮಾಡಿಕೊಡಲು ಸಮ್ಮತಿಸುತ್ತಾರೆ. ಎಲ್ಲರೂ ಸಂತೋಷದಿಂದ ಪುರಕ್ಕೆ ಬಂದು, ಬಳಿಕ ತಮ್ಮ ಸುದ್ಯುಮ್ನನ ವಿವಾಹವನ್ನು ಈಡೇರಿಸುತ್ತಾರೆ.

ಇತ್ತ ಇಂದ್ರ, ಬೃಹಸ್ಪತಿ ಒಟ್ಟಾಗಿ ಕ್ಷೀರಶರಧಿಗೆ ಬಂದು ಹರಿಯನ್ನು ಪ್ರಾರ್ಥಿಸುತ್ತಾರೆ. ಬಂದ ಕಷ್ಟವೇನೆಂದು ಹರಿ ವಿಚಾರಿಸಲು, ಮನುಜನಾದ ದುರ್ಜಯನಿಂದ ತಮಗೊದಗಿದ ಪರಿಭವವನ್ನು ಇಂದ್ರ ಹೇಳುತ್ತಾನೆ. ಹರಿ ನಗೆಯಾಡುತ್ತಾ ವರಬಲವಿಲ್ಲದ ಮನುಜ, ಶಾಪಬಾಧೆ ಇಲ್ಲದ ನಿನ್ನನ್ನು ಎಂತು ಗೆಲುವ? ಎಲ್ಲೊ ನೀನೇ ತಪ್ಪಿರಬೇಕು ಎಂದು ಕೇಳಿದಾಗ ಸುರಪತಿ ಆತ್ರೇಯರ ಶಾಪದ ಕಥನವನ್ನು ನಿರೂಪಿಸುತ್ತಾನೆ. ಹರಿಯು ಪದವಿಯನ್ನು ತಪೋಬಲಕ್ಕಿಂತ ಹಿರಿದೆಂದು ಭ್ರಮಿಸಿ ಬಂದ ಶೋಕ ಇದು. ಈಗ ಋಷಿ ವಿದ್ಯೆ, ಬ್ರಹ್ಮ ಬಲ ಜೊತೆಗಿರುವ ದುರ್ಜಯನನ್ನು ಅವನು ಆಸುರೀ ಪ್ರವೃತ್ತಿ ತೋರದೆ, ಬ್ರಹ್ಮದ್ವೇಷ ಸಾಧಿಸದೆ ಗೆಲಲಸಾಧ್ಯ. ಅಲ್ಲಿ ತನಕ ಕಾಯಬೇಕು ಎನ್ನುತ್ತಾನೆ. ವೇದವಿದನಾದ ಮುನಿ ಗೌರಮುಖ ಎಂಬಾತ ಶಿಷ್ಯರನ್ನು ಪಾಲಿಸುತ್ತಿರುವ ಸಂದರ್ಭ ವಿಶ್ವನಾಯಕ ಹರಿಯೊಲುಮೆ ಪಡೆಯಲು ತಪೋನಿರತನಾಗುವನು. ಒಲಿದು ಬಂದ ಹರಿ, ಬೇಕಾದುದೇನೆಂದು ಕೇಳಲು, ಲೋಕ ಕಲ್ಯಾಣಾರ್ಥ ತಾನು ಆಚರಿಸಲಿರುವ ಯಜ್ಞಕ್ಕೆ ಬೇಕಾದ ಸಮಸ್ತವನ್ನೂ ಹೊಂದುವಂತೆ ಅನುಗ್ರಹಿಸಬೇಕು ಎಂದು ಯಾಚಿಸುತ್ತಾನೆ. ಆಗ ಹರಿ ಬಯಸಿದ್ದನ್ನೀವ 'ಚಿಂತಾಮಣಿ'ಯನ್ನಿತ್ತು, ತೊಡಕಾದಾಗ ತನ್ನನ್ನು ಕರೆ ಎಂದು ಅನುಗ್ರಹಿಸುತ್ತಾನೆ.

ಚಕ್ರವರ್ತಿಯಾಗಿ ಮೆರೆಯುತ್ತಿರುವ ದುರ್ಜಯನ ಬಳಿ ವನಪಾಲಕರು ಬಂದು ಕಾಡು ಪ್ರಾಣಿಗಳ ಹಾವಳಿಯ ಬಗ್ಗೆ ದೂರಿತ್ತಾಗ, ಆತ ಶಬರ ಪಡೆ ಸಹಿತ ಬೇಟೆಗೆ ತೆರಳುತ್ತಾನೆ. ಬೇಟೆಯಾಡಿದ ಬಳಿಕ ಬಂದು ಸೇರಿದ ಸ್ಥಳದಲ್ಲಿರುವ ಆಶ್ರಮದ ವೈಶಿಷ್ಟ್ಯ ಗಮನಿಸಿ, ಗೌರಮುಖನನ್ನು ಕಾಣಲು ಬಂದು, ಮಣಿಯುತ್ತಾನೆ. ಅರಸನನ್ನು ಗೌರಮುಖ ವಿಚಾರಿಸಿ, ಬೇಟೆಗೆ ಬಂದುದನ್ನರಿತು, ಹೊರಟು ನಿಂತ ದುರ್ಜಯನ ಬಳಿ ಮಧ್ಯಾಹ್ನದ ಈ ಸಮಯ ಇಲ್ಲೇ ಉಂಡು ಹೋಗಿ ಎನ್ನುತ್ತಾನೆ. ಅಕ್ಷೋಹಿಣಿ ಸಂಖ್ಯೆಯ ಸೇನೆ ಜೊತೆಗಿದೆ ಎಂದು ದುರ್ಜಯ ನಾಡಿದಾಗ, ನೀವು ಸ್ನಾನ ಪೂರೈಸಿ ಬಂದರೆ ಎಲ್ಲರಿಗೂ ಭೋಜನವನ್ನು ಬಡಿಸುವೆ ಎನ್ನುತ್ತಾನೆ ಗೌರಮುಖ. ಒಪ್ಪಿದ ದುರ್ಜಯ ಮಿಂದು ಬರಲು, ಗೌರಮುಖ ಚಿಂತಾಮಣಿಯನ್ನು ಪ್ರಾರ್ಥಿಸಿ, ಅದರ ಬಲುಹಿಂದ ಎಲ್ಲರಿಗೂ ಚಪ್ಪರ ಹಾಕಿ, ಷಡ್ರಸ ಭೋಜನ ಬಡಿಸುತ್ತಾನೆ. ವಿಸ್ಮಯದಿಂದ ದುರ್ಜಯ ಇದು ಹೇಗೆ ಸಾಧ್ಯ ಎಂದು ಗೌರಮುಖನನ್ನು ಪ್ರಶ್ನಿಸುವಾಗ, ಚಿಂತಾಮಣಿಯ ಮಹಾತ್ಮೆ ಎಂದಾತ ಉತ್ತರಿಸುತ್ತಾನೆ. ಚಿಂತಾಮಣಿಯ ಕುರಿತು ಮೋಹಿತನಾಗಿ ದುರ್ಜಯ ಅದನ್ನು ತನಗೆ ಈಯಬೇಕೆನ್ನುತ್ತಾನೆ. ಹರಿಯ ಅನುಗ್ರಹದಿಂದ ಲಭ್ಯವಾದುದನ್ನು ಕೊಡಲಾರೆ ಎಂದು ಗೌರಮುಖ ನಿರಾಕರಿಸುತ್ತಾನೆ. ಬಗೆಬಗೆಯಿಂದ ದುರ್ಜಯ ಕೇಳಿದರೂ ಕೊಡಲೊಪ್ಪದ ಗೌರಮುಖನ ಮೇಲೆ, ರಾಜ ಮುನಿದು ಆಶ್ರಮವನ್ನೇ ಸುಡುವೆ ಎಂದಾಗ, ಗೌರಮುಖ ಸಂಕಟ ನಿವಾರಿಸಲು ಹರಿಯನ್ನು ನೆನೆಯುತ್ತಾನೆ. ಆಕ್ರಮಿಸಲು ಹೊರಟ ದುರ್ಜಯನ ಸೈನ್ಯವನ್ನು ಯೋಗಾಸನಸ್ಥನಾದ ಗೌರಮುಖನಿಂದ ಹೊರಟ ಅಗ್ನಿ ಸುಟ್ಟುರುಹಿತು. ಆಗ ಸಮಗ್ರ ಚತುರಂಗ ಬಲದಿಂದ ಒಡಗೂಡಿ ದುರ್ಜಯ ಆಕ್ರಮಣ ಮಾಡುತ್ತಾನೆ. ಆಗ ಗರುಡವಾಹನನೇ ಪ್ರಕಟನಾಗುತ್ತಾನೆ. ದುರ್ಜಯನನ್ನು ತಡೆದ ಹರಿಯನ್ನೂ ಉದ್ಧಟನಾಗಿ ದುರ್ಜಯ ಮಾನಿಸದಿದ್ದಾಗ, ಶ್ರೀಹರಿಯ ಆಜ್ಞೆಯಿಂದ ಒಂದೇ ನಿಮಿಷದಲ್ಲಿ ಸುದರ್ಶನ ಚಕ್ರ ದುರ್ಜಯನನ್ನು ಕೊಂದು ಕಳೆಯುತ್ತದೆ. ಸುರರು ಹೂಮಳೆಗರೆಯುತ್ತಾರೆ. ಆಗ ಗೌರಮುಖನು ಯೋಗ ಸಮಾಧಿಯಿಂದ ಎಚ್ಚೆತ್ತುಕೊಳ್ಳುತ್ತಾನೆ. ಶ್ರೀಹರಿಯನ್ನು ನೋಡಿದ ಗೌರಮುಖ ಭಕ್ತಿ ಪರವಶತೆಯಿಂದ ಸ್ತುತಿಸುತ್ತಾ, ಆಶ್ರಮದಲ್ಲಾದ ಅವಾಂತರವನ್ನು ಸಹಿಸುವುದೆಂತು ಎನ್ನುತ್ತಾನೆ. ಶ್ರೀಹರಿ ಸಮಾಧಾನಪಡಿಸುತ್ತಾ, ಬ್ರಹ್ಮ ದ್ವೇಷದಿಂದ ಇಂದ್ರ ಹಿಂದೆ ಪರಾಜಿತನಾದ. ಈಗ ತಾಮಸ ಪ್ರವೃತ್ತಿ, ಬ್ರಹ್ಮ ದ್ವೇಷದಿಂದ ದುರ್ಜಯ ಅಳಿದ. ತನ್ನ ನೇಮದಿಂದ ನಿಮಿಷದಲ್ಲೇ ಶತ್ರು ಸಂಹಾರಗೈದ ಈ ಕ್ಷೇತ್ರ ಮುಂದೆ 'ನೈಮಿಷಾರಣ್ಯ' ಎಂದೇ ಖ್ಯಾತವಾಗಲಿ. ಯಾಗ, ಯೋಗ, ಜ್ಞಾನಗಳ ನೆಲೆ ಎನಿಸುವ ಈ ಸುಕ್ಷೇತ್ರ ಮೋಕ್ಷಕ್ಕೆ ಮಾರ್ಗ ತೋರಲಿ ಎಂದು ಅನುಗ್ರಹಿಸುತ್ತಾನೆ. ಧನ್ಯತೆಯಿಂದ ಮಣಿದ ಗೌರಮುಖನನ್ನು ಹರಸಿ, ಇಂದ್ರನಿಗೆ ಸ್ವರ್ಗವನ್ನಿತ್ತು ಶ್ರೀಹರಿ ವೈಕುಂಠಕ್ಕೆ ಮರಳುತ್ತಾನೆ.

**ಕವಿ ಪರಿಚಯ:**

ನಿವೃತ್ತ ಕನ್ನಡ ಉಪನ್ಯಾಸಕ. ಸಾಹಿತಿ, ಯಕ್ಷಗಾನ ಅರ್ಥಧಾರಿ ಮತ್ತು ಪ್ರಸಂಗ ಕರ್ತೃ. ಯಕ್ಷಗಾನ ವಿಮರ್ಶಕ. ಊರು - ಶಿವಮೊಗ್ಗ ಜಿಲ್ಲೆಯ ಹೊಸನಗರ ತಾಲೂಕು, ನಿಟ್ಟೂರು ಬಳಿಯ ಧರೇಮನೆ. ಕಳೆದ ಮೂವತ್ತಾರು ವರ್ಷಗಳಿಂದ ನೆಲೆಸಿರುವುದು ಮಂಗಳೂರು ತಾಲೂಕಿನ ಕಿನ್ನಿಗೋಳಿಯಲ್ಲಿ. ವಿದ್ಯಾರ್ಥಿ ದೆಸೆಯಿಂದಲೇ ಯಕ್ಷಗಾನದಿಂದ ಆಕರ್ಷಿತ. ವೇಷಧಾರಿಯಾಗಿ, ಅರ್ಥಧಾರಿಯಾಗಿ ಪಳಗಲು ವಿದ್ಯಾಭ್ಯಾಸ ಮಾಡಿದ ಉಡುಪಿ ಸಹಕಾರಿಯಾಯಿತು.

ಉಡುಪಿ ಯಕ್ಷಗಾನ ಕೇಂದ್ರ ಯಕ್ಷಗಾನ ಪ್ರಸಂಗ ಮಾಲಿಕಾ ಎಂಬ ಶೀರ್ಷಿಕೆಯಲ್ಲಿ ೧೩ ಪ್ರಸಂಗಗಳನ್ನು ಒಂದೇ ಕೃತಿಯಲ್ಲಿ ಪ್ರಕಟಿಸಿದೆ. ಯಕ್ಷಗಾನದ ಸುಮಾರು ನೂರಾಮೂವತ್ತು ಮಟ್ಟುಗಳನ್ನು ವಿವಿಧ ಪ್ರಸಂಗಗಳಲ್ಲಿ ಬಳಸಿಕೊಳ್ಳಲಾಗಿದೆ. ಪ್ರಸಂಗ ರಚನೆ ಮಾತ್ರವಲ್ಲದೆ, ಯಕ್ಷಗಾನ ಕ್ಷೇತ್ರಕ್ಕೆ ಸಂಬಂಧಿಸಿದ ನೂರಾರು ವಿಮರ್ಶೆಗಳು, ಚಿಂತನೆಗಳು ನಾಡಿನ ವಿವಿಧ ಪತ್ರಿಕೆಗಳಲ್ಲಿ, ಗ್ರಂಥಗಳಲ್ಲಿ ಪ್ರಕಟಗೊಂಡಿವೆ. ಕಿನ್ನಿಗೋಳಿಯ `ಯಕ್ಷಲಹರಿ' ಯಕ್ಷಗಾನ ಸಂಸ್ಥೆಯಲ್ಲಿ ೨೪ ವರ್ಷ ಕಾರ್ಯದರ್ಶಿಯಾಗಿ ಸೇವೆ. ಹಲವು ತಾಳಮದ್ದಲೆ ಸ್ಪರ್ಧೆಗಳನ್ನು, ಸಪ್ತಾಹಗಳನ್ನು ಆಯೋಜಿಸಿದ್ದಾರೆ. ಜೊತೆಗೆ, ವಿವಿಧ ಸಂಘ ಸಂಸ್ಥೆಗಳು ಆಯೋಜಿಸಿರುವ ಆಟ-ಕೂಟಗಳಲ್ಲಿ ಅವಲೋಕನಕಾರರಾಗಿ ಮತ್ತು ಗೋಷ್ಠಿ, ಕಮ್ಮಟಗಳಲ್ಲಿ ಸಂಪನ್ಮೂಲ ವ್ಯಕ್ತಿಯಾಗಿ ಪಾಲ್ಗೊಂಡ ಅನುಭವ. ಅರ್ಥಧಾರಿಯಾಗಿ ಸಾವಿರಾರು ಕೂಟಗಳಲ್ಲಿ ಭಾಗವಹಿಸುವಿಕೆ. ಎಲ್ಲ ಬಗೆಯ ಪಾತ್ರಗಳ ನಿರ್ವಹಣೆ. ಅವಧಾನಗಳಲ್ಲಿ ಪೃಚ್ಛಕರಾಗಿ, ಸಂಘ-ಸಂಸ್ಥೆಗಳ ಸಲಹೆಗಾರರಾಗಿ, ಶ್ರೀ ಗುರು ರಾಘವೇಂದ್ರ ಸಂಚಾರಿ ಯಕ್ಷಗಾನ ಮಂಡಳಿ ಹೊಸಬೆಟ್ಟು ಸುರತ್ಕಲ್ ಇದರ ಉಪಾಧ್ಯಕ್ಷರಾಗಿ ಕಾರ್ಯ ನಿರ್ವಹಣೆ. ಸಾಹಿತ್ಯದ ಇತರ ಪ್ರಕಾರಗಳಲ್ಲೂ ಆಸಕ್ತಿ. ರಾಜಕೀಯ ವಿಶ್ಲೇಷಣೆ, ರಂಗ ವಿಮರ್ಶೆ, ಲಲಿತ ಪ್ರಬಂಧ, ನಗೆ ಲೇಖನಗಳನ್ನು ಬರೆಯುವುದೂ ಹವ್ಯಾಸ. ಹಾಸ್ಯ ಬರಹ ಕುರಿತ ರಾಜ್ಯ ಮಟ್ಟದ ಸ್ಪರ್ಧೆಗಳಲ್ಲಿ ಬಹುಮಾನವೂ ಬಂದಿದೆ. 'ಬಸ್ಸು ಜಟಕಾ ಬಂಡಿ' ಎಂಬ ನಗೆ ಲೇಖನಗಳ ಪುಸ್ತಕ ಪ್ರಕಟಗೊಂಡಿದೆ. ಶ್ರೀರಾಮಚಂದ್ರಾಪುರ ಮಠದಿಂದ ಪ್ರಕಟಗೊಂಡ ಗುರುಗ್ರಂಥಮಾಲಿಕೆಯಲ್ಲಿ ಶುಕ್ರಾಚಾರ್ಯ, ದ್ರೋಣಾಚಾರ್ಯ, ಮಹಾಮುನಿ ಶುಕ ಎಂಬ ಮೂರು ಕೃತಿಗಳು ಪ್ರಕಟವಾಗಿವೆ. ಮಂಗಳೂರು ವಿಶ್ವವಿದ್ಯಾನಿಲಯದ ದ್ವಿತೀಯ ಬಿ. ಕಾಂ ಪದವಿ ಕನ್ನಡ ಪಠ್ಯಪುಸ್ತಕದಲ್ಲಿ 'ಮಹಾಪ್ರಸ್ಥಾನ' ಪ್ರಸಂಗದ ಪಾಂಡವ ಸ್ವರ್ಗಾರೋಹಣದ ಒಂದು ಭಾಗ ಪಠ್ಯವಾಗಿದೆ.

ಯಕ್ಷಗಾನ ಪತ್ರಿಕೆ 'ಕಣಿಪುರ'ದಲ್ಲಿ ರಂಗಸ್ಥಳದ ಅಭಿಜಾತ ಕವಿಗಳು ಎಂಬ ಅಂಕಣವನ್ನು ಬರೆಯುತ್ತಿದ್ದು, ಇದರಲ್ಲಿ ಯಕ್ಷಗಾನ ಸುಪ್ರಸಿದ್ಧ ಕವಿಗಳ ಪರಿಚಯ ನೀಡಲಾಗುತ್ತಿದೆ. ಬೆಂಗಳೂರಿನ `ಸುದಿನ ಸುರಭಿ' ಪತ್ರಿಕೆಯಲ್ಲಿ 'ಪುರಾಣ ಸ್ವಾರಸ್ಯಗಳು' ಎಂಬ ಅಂಕಣ ಬರಹ ಪ್ರಕಟಗೊಂಡಿದೆ. ಶ್ರೀ ರಾಮಚಂದ್ರಾಪುರ ಮಠದ 'ಧರ್ಮಭಾರತೀ' ಮಾಸಪತ್ರಿಕೆಯಲ್ಲಿ 'ವೀರತಪಸ್ವಿ' ಧಾರಾವಾಹಿಯಾಗಿ ಪ್ರಕಟವಾಗುತ್ತಿದೆ.

ಉಡುಪಿಯ ಯಕ್ಷಗಾನ ಕಲಾರಂಗ ಸಂಸ್ಥೆ ೨೦೧೫ನೇ ಸಾಲಿನ 'ತಲ್ಲೂರು ಕನಕ ಅಣ್ಣಯ್ಯ' ಪ್ರಶಸ್ತಿ ನೀಡಿ ಗೌರವಿಸಿದೆ. ಜೊತೆಗೆ ಅವರ ಪ್ರಸಂಗಗಳ ಕುರಿತ ಸಾಹಿತ್ಯ-ಸಾಧನಾವಲೋಕನ, ಅವರ ಯಕ್ಷಗಾನ ಪ್ರಸಂಗಗಳ ವಸ್ತುವಿನ್ಯಾಸ-ಆಶಯ, ಛಂದಸ್ಸಿನ ಬಳಕೆ ಕುರಿತಾಗಿ ಯಕ್ಷ ವಿದ್ವತ್ ಲೋಕ ಭಾಷಣ-ಚರ್ಚೆಗಳನ್ನು ದಿನವಿಡೀ ನಡೆಸಿದ್ದು ಗಮನಾರ್ಹ. ಯಕ್ಷಗಾನ ಬಯಲಾಟ ಅಕಾಡೆಮಿ ಶ್ರೀಧರರ 'ಯಕ್ಷಗಾನ ಪ್ರಸಂಗ ಮಾಲಿಕಾ' ಕೃತಿಗೆ ೨೦೧೧ನೇ ಸಾಲಿನ ಪುಸ್ತಕ ಪ್ರಶಸ್ತಿ ನೀಡಿ ಗೌರವಿಸಿದೆ. ಶಿವಮೊಗ್ಗದಲ್ಲಿ ೨೦೧೬ರ ಜನವರಿಯಲ್ಲಿ ನಡೆದ ಅಖಿಲ ಭಾರತ ೧೧ನೇ ಯಕ್ಷಗಾನ ಸಾಹಿತ್ಯ ಸಮ್ಮೇಳನದ ಸರ್ವಾಧ್ಯಕ್ಷರಾಗಿದ್ದರು. ೨೦೧೬ರ ಫೆಬ್ರವರಿ ತಿಂಗಳಲ್ಲಿ ಕೆರೆಮನೆಯಲ್ಲಿ ನಡೆದ 'ಶಂಭುಹೆಗಡೆ ರಾಷ್ಟ್ರೀಯ ನಾಟ್ಯೋತ್ಸವ' ಕಾರ್ಯಕ್ರಮದಲ್ಲಿ ಸನ್ಮಾನಿಸಲ್ಪಟ್ಟಿದ್ದಾರೆ. 'ಜಡಭರತ' ಪೌರಾಣಿಕ ಕಾದಂಬರಿ ಪ್ರಕಟಗೊಂಡಿದ್ದು, 'ಅಸುರ ಗುರು' ಎಂಬ ಬೃಹತ್ ಕಾದಂಬರಿ ಪ್ರಕಟಣೆಗೆ ಸಿದ್ಧವಾಗಿದೆ.

ಇವರು ಬರೆದ ಪ್ರಸಂಗಗಳು: ಕಬಂಧ ಮೋಕ್ಷ, ಸುದ್ಯುಮ್ನ, ಆದಿನಾರಾಯಣ ದರ್ಶನ, ಕುವಲಯಾಶ್ವ, ಗರುಡ ಪ್ರತಾಪ, ಬಾಲಭಾರತ, ಸತ್ವಶೈಥಿಲ್ಯ, ಮಹಾಪ್ರಸ್ಥಾನ, ಪರೀಕ್ಷಿತ-ಆಸ್ತೀಕಜನ್ಮ, ಜನಮೇಜಯ, ಶುಕ್ರಸಂಜೀವಿನೀ, ಅಗಸ್ತ್ಯ, ಜಡಭರತ, ಸಮ್ರಾಟ್ ಮರುತ್ತ, ಕುಜ್ರುಂಭ ಕಂದರ, ಯಕ್ಷಪ್ರಶ್ನೆ, ಯೋಗಾವತಾರಂ, ಫಲ್ಗುಣೀ ತೀರ್ಥ ಮಹಿಮೆ, ವೀರ ಚಿತ್ರಧ್ವಜ, ಶ್ರೀರಂಗ ರಾಯಭಾರ, ನಾಲಾಯನೀ, ಬಕನ ಬಂಡಿ, ಅಂಗಾರಪರ್ಣ ವೃತ್ತಾಂತ, ಧೌಮ್ಯಪರಿಗ್ರಹ, ದ್ರೌಪದೀ ಸ್ವಯಂವರ, ದುರ್ಗಮಾಸುರ ವಧೆ, ಶರವೂರ ಶ್ರೀದುರ್ಗೆ, ಪೃಥುಯಜ್ಞ, ಹನ್ನಾರ ರಾಮೇಶ್ವರ ಮಹಾತ್ಮೆ, ನೈಮಿಷಾರಣ್ಯ ನಿರ್ಮಾಣ, ಸ್ವರ್ಣಕಮಲ

**ಟಿಪ್ಪಣಿ :**

2017ರಲ್ಲಿ 'ಮಹೇಂದ್ರ ಚರಿತಮ್' ತಾಳಮದ್ದಲೆ ಸಪ್ತಾಹಕ್ಕಾಗಿ ವರಾಹ ಪುರಾಣದ ಕಥೆಯನ್ನು ಆಧರಿಸಿ ವಿರಚಿತ ಪ್ರಸಂಗ. ಇದು ವಿ| ಕಮಲಾದೇವಿ ಪ್ರಸಾದ ಆಸ್ರಣ್ಣ ಅವರ ಕಥಾ ಸಂಯೋಜನೆ

# ಪ್ರಸಂಗ ಸಾಹಿತ್ಯ

**ಭಾಮಿನಿ**
ಆದಿಯಲಿ ಗಣನಾಥಗೊಂದಿಸಿ |
ವೇದ ಮಾತೆಗೆ ನಮಿಸಿ ಶ್ರೀಗುರು |
ಬಾದರಾಯಣಗೆರಗಿ ಯಕ್ಷಕವೀಶ್ವರರ ನೆನೆದು ||
ತೇದು ಜೀವವ ಕಲೆಯ ಬೆಳೆಸಿದ |
ಸಾಧಕರ ಸ್ಮರಿಸುತ್ತ ಯಕ್ಷ ಮ |
ಹೋದಯರ ಸ್ಮರಿಸುತ್ತ ಪೇಳುವೆ ಯಕ್ಷ ಕಾವ್ಯವನು || 1 ||

**ಕಂದ**
ಸ್ಮರಿಪೆಂ ಕೊರ್ಗಿಯುಪಾಧ್ಯರ |
ವರಕವಿಸೂರ್ಯರಹ ಸೂರ್ಯನಾರಾಯಣರಂ ||
ನಿರತಂ ತಿದ್ದುತ ಬೆಳೆಸಿದ |
ಸ್ಮರಣೀಯರ ವೇಂಕಟೇಶ್ವರರುಭಯರುಗಳಂ || 2 ||

***ಕಥಾರಂಭ :***
**ಕಾಂಬೋಧಿ - ಝಂಪೆ**
ಆಳುತಿರ್ದನು ಪುಣ್ಯಧಾಮ ಕಾಶೀಪುರವ |
ಶೀಲ ಸಚ್ಚರಿತ ಧರ್ಮಾತ್ಮ ||
ಭೂಲೋಲ ಸುಪ್ರತೀಕನು ಪ್ರಜಾಪರಿವಾರ |
ಓಲೈಸೆ ಸಾಮಂತ ನೃಪರು || 3 ||
ಮಡದಿಯರು ವಿದ್ಯುತ್ ಪ್ರಭಾ ಕಾಂತಿಮತಿಯರಿಂ ।
ದೊಡಗೂಡಿ ಧರ್ಮ ಸಮ್ಮತದಿ ||
ಪೊಡವಿಪಾಲಕನಿರಲು ಪುತ್ರರಿಲ್ಲದ ಚಿಂತೆ |
ಬಿಡದೆ ಬಾಧಿಸುತಿಹುದು ನೃಪನ || 4 ||

**ಭಾಮಿನಿ**
ಓಲಗವ ಬಿಟ್ಟೊಂದು ದಿನ ತ |
ನ್ನಾಲಯಕೆ ನಡೆತಂದು ಚಿಂತೆಯೊ |
ಳಾಳಿ ಪಲ್ಲಂಗದಲಿ ಪವಡಿಸೆ ನೆನೆದು ಭವಿತವ್ಯ ||
ಕೋಳುವೋದುದು ವಂಶದುನ್ನತಿ |
ಪಾಲಿಸುವರಾರಕಟ ರಾಜ್ಯವ |
ಮೇಲೆ ಸದ್ಗತಿಹೀನನಾದೆನೆನುತ್ತ ಬಿಸುಸುಯ್ದ || 5 ||

**ಕೇದಾರಗೌಳ - ಅಷ್ಟ**
ಕ್ಷಿತಿಪ ಚಿಂತೆಯೊಳಿರಲರಿತೈತಂದಾತನ |
ಸತಿಯರಾತಂಕದಿಂದ ||
ಹಿತದಿಂದಲುಪಚಾರಗೈದು ಸಂತೈಸುತ್ತ |
ಮತಿವಂತೆಯರು ಕೇಳ್ವರು || 6 ||
ಆತಂಕವೇನಾಯ್ತು ಸೋತಿದೆ ವದನವಿ |
ದೇತರ ಚಿಂತೆ ಬಂತು ||
ಪ್ರೀತನೆ ಮಂತ್ರಿ ಸಾಮಂತರು ಪ್ರಜೆಗಳು |
ನೀತಿಯಿಂದಿರುವರೈಸೆ || 7 ||
ಆಯಾಸಗೊಂಡಿರೆ ಕಾಯದಾರೋಗ್ಯದ |
ಆಯಗೆಟ್ಟಿತೆ ರಮಣ ||
ನೋಯಲೇತಕೆ ಪೇಳಿ ನಿಮ್ಮಂತರಂಗವ |
ಆಯತಿಗುಂದಲೇಕೆ || 8 ||

**ಸೌರಾಷ್ಟ್ರ - ತ್ರಿವುಡೆ**
ರಾಜನೀತಿಯು ಪ್ರಾಜರೋಜೆಯು |
ಸಾಜವಿದೆ ತಪ್ಪಿಲ್ಲ ರಾಜ್ಯವ |
ರಾಜಕವು ಮುಂದೇನು ಚಿಂತೆಯು | ನೈಜವೈಸೆ || 9 ||
ವ್ರತನಿಯಮ ತೀರ್ಥಾಟನಂಗಳು |
ಕ್ರತುವು ದೇವ ಪ್ರತತಿಯರ್ಚನೆ |
ಕ್ಷಿತಿಯಮರರಿಂಗಿತ್ತ ದಾನವ | ಗತಿಯ ಕಾಣೆ || 10 ||

**ಕಾಪಿ - ಅಷ್ಟ**
ಪತಿದೇವ ಕೇಳ್ವುದೆಮ್ಮೊಲವ | ಜಗ |
ತ್ಪತಿಯನುಗ್ರಹಕಾಗಿ ಗೈದೆವು ವ್ರತವ ||
ಸುತರ ಚಿಂತೆಯನೀಗಲೀಗ | ವ್ರತಿ |
ಪತಿಸೇವೆಗೊದಗಿಬಾರದೆ ದಿವ್ಯಯೋಗ || 11 ||

ಅಕ್ಕ ಪೇಳ್ವುದು ಸತ್ಯ ರಮಣ | ಪುಣ್ಯ |
ಬಕ್ಕು ತಾಪಸ ಸೇವೆಯಿಂ ಮುನಿಕರುಣ ||
ದಕ್ಕಲೆಮ್ಮಯ ಭಾಗ್ಯ ಬೆಳೆಗು | ದೈವ |
ದಕ್ಕರೆ ಬರುಗು ಮುಂದಕೆ ಚಿಂತೆಯಳಿಗು || 12 ||

**ಭಾಮಿನಿ**
ಮಡದಿಯರ ನುಡಿಗೊಪ್ಪಿ ಭೂಪತಿ |
ಪೊಡವಿಭಾರವ ಸಚಿವಗೊಪ್ಪಿಸಿ |
ಜಡವ ನೀಗುವ ಜ್ಞಾನ ಸತ್ರದ ಪುಣ್ಯಮಂ ಬಯಸಿ ||
ಬೆಡಗಿನೈಸಿರಿ ಚಿತ್ರಕೂಟದಿ |
ಮೃಡಗೆಣೆಯನಾತ್ರೇಯ ಮುನಿವರ |
ನೆಡೆಗೆ ನಾರಿಯರೊಡನೆ ಬಂದನು ಭಾಗ್ಯವನ್ನರಸಿ || 13 ||

**ಮಧುಮಾಧವಿ - ತ್ರಿವುಡೆ**
ಜ್ಞಾನವಾರಿಧಿ ಚಂದ್ರ ತಾಪಸ |
ಭಾನು ಸಕಲಾಗಮ ವಿಚಾರಸು |
ಧೇನುವೆನಿಪಾತ್ರೇಯ ಮೆರೆದ ಮ |
ಹಾನುಭಾವಿ ಮುನೀಂದ್ರನು || 14 ||
ಬೋಧಿಸುತ ಛಾತ್ರರಿಗೆ ಬದುಕಿನ |
ಸಾಧನೆಯ ವೈದಿಕ ಸುಮಾರ್ಗವ |
ಮೋದದಿಂ ತಪವೆಸಗಿ ಬೆಳಗಿದ |
ಭೂದಿವಿಜ ಸಂಮಾನ್ಯನು || 15 ||

**ಕಂದ**
ಯಮಿವರನಂಘ್ರಿಗೆ ಭೂಪಂ |
ನಮಿಸಲ್ ಕಾಂತೆಯರ ಸಹಿತ ಪರಸುತಲವರಂ ||
ಕ್ಷಮೆಯರಸನನುಪಚರಿಸುತ |
ರಮಣಿಯರೊಡನೈದಿ ಬಂದ ಕಾರಣ ಕೇಳ್ದಂ || 16 ||

**ಸುರುಟಿ - ಏಕ**
ಕುಶಲವೆ ವಸುಧೇಶ | ಪುಣ್ಯದ |
ವಸುಮತಿ ತವ ದೇಶ ||
ಪಶುಪತಿ ವಿಷಯದ | ವಿಸರವು ಕ್ಷೇಮವೆ |
ರಸೆಯಧಿಪನೆ ಬಂ | ದೊಸಗೆಯನುಸುರೈ || 17 || (ವಿಷಯ=ದೇಶ)
ತಮ್ಮ ಕರುಣದಿಂದ | ಸಕಲವು |
ನೆಮ್ಮದಿ ಸುಖದಿಂದ ||
ನೆಮ್ಮುತ ಧರ್ಮವ | ಸಮ್ಮತದೊಳಗಿರೆ |
ಹೆಮ್ಮೆಯು ಗುರುವರ | ನೆಮ್ಮಿದೆ ತವ ಪದ || 18 ||

**ಸಾಂಗತ್ಯ - ರೂಪಕ**
ಮನದ ಮನೆಯ ಚಿಂತೆ ತೊಳೆವುದು ಗುರುಸೇವೆ |
ಯನುಗೈಯ್ಯಲೆಂದು ಬಂದಿಹೆವು ||
ಘನಮಹಿಮರೆ ನಿತ್ಯ ಸೇವಾ ಸೌಭಾಗ್ಯಕೆಂ |
ದನುಗೊಳಿಸಲು ಧನ್ಯರಹೆವು || 19 ||
ಪರಮ ವೈಭವದಿಂದ ಸುಖ ಸಂಪದಗಳಿಂದ |
ಲಿರುವಿರಿ ನೀವು ರಾಣಿಯರು ||
ಇರಬೇಕಿಲ್ಲಿಯ ಕ್ರಮವಿರುವಂತೆ ಸಾಧ್ಯವೆ |
ಅರಿತು ನೋಡಿರಿ ಕಷ್ಟದಿರವ || 20 ||
ಅರಮನೆಗಿಂತಲು ಗುರುಮನೆ ಪಿರಿದೆಂದು |
ಅರಸಿಯರರಿತು ಬಂದಿಹರು ||
ಚರಣ ಸೇವೆಯ ಭಾಗ್ಯ ಕರುಣಿಸಿ ಪರಸಿರಿ |
ಗುರುವರ್ಯ ಧನ್ಯರಾಗುವೆವು || 21 ||

*ಮಹೇಂದ್ರನ ಓಲಗ*

**ತುಜಾವಂತು - ಝಂಪೆ**
ಸುತ್ರಾಮನೊಪ್ಪಿದ ಸುಧರ್ಮದಲಿ ದಿಕ್ಪಾಲ |
ಮೊತ್ತದೊಡಗೂಡುತ್ತ ವೈಭವಂ ಮಿಗಲು ||
ಮಿತ್ರಸುತ ಹುತವಹಂ ವರುಣ ವಾಯು ಕುಬೇರ |
ಮರ್ತ್ಯವಾಹನ ಸಹಿತಲಿತ್ತನೋಲಗವ || 22 ||

ಕೇಳಿ ಸುಮನಸರೆಲ್ಲ ಕಾಳಗದ ಕಥೆಯಲ್ಲ |
ಭೂಲೋಕ ನಾಕವನ್ನೇಳಿಸಿಹುದಲ್ಲ ||
ಆಲಸವ ಕಳೆಯುವರೆ ಕಾಲವನುಕೂಲವಿದೆ |
ಖೂಳರುಪಟಳವಿಲ್ಲ ಪೇಳಲೇನಿಲ್ಲ || 23 ||

**ಭಾಮಿನಿ**
ಇಂದ್ರನೈರಾವತವನೇರಿ ವ |
ಸುಂಧರೆಯ ಸೊಬಗನ್ನು ಸಂಭ್ರಮ |
ದಿಂದಲೀಕ್ಷಿಸುತೈದಿ ಹಿಮಗಿರಿ ಸಾನುವಿಂದಿಳಿದು ||
ಮುಂದೆ ಮುಂದೈತರುತ ಬಹುದಿನ |
ದಿಂದ ಬಾಧಿಪ ಬೇಸರವ ಕಳೆ |
ದಂದದಿಂ ವಿಹರಿಸುತ ಬರುತಿರಲಿತ್ತಲಾಶ್ರಮದಿ || 24 ||

***(ಆತ್ರೇಯ ಋಷಿಯು ಸುಪ್ರತೀಕನೊಡನೆ)***

**ಪಂತುವರಾಳಿ - ಏಕ**
ದೊರೆಯೆ ಸಂತಸವಾಯಿತು | ನಿಸ್ಪೃಹ ಸೇವೆ |
ಕೊರತೆಗೊಳ್ಳದೆ ಸಾಗಿತು ||
ಭರಿತ ವೈಭವದಿಂದ | ಮೆರೆವ ನಿನ್ನರಸಿಯ |
ರರಿತಾಶ್ರಮದ ರೀತಿಯ | ಸಾಧಿಸಿದರು |
ಹಿರಿತನದತಿ ಪ್ರೀತಿಯ || 25 ||
ಮಾನವಾಧಿಪನೆ ಪೇಳು | ಭಕ್ತಿಗೆ ಮೆಚ್ಚು |
ತಾನೀವೆ ವರವ ಕೇಳು ||
ಕಾಣದಾತಂಕವ | ನೀನನುಭವಿಸುವು |
ದಾನರಿತಿರುವೆನಿಂದು || ನಿಶ್ಚಯದಿ ಪೇ |
ಳೇನಿದೆ ಕೊರತೆಯೆಂದು || 26 ||

***(ಕಮಂಡಲುವನ್ನು ಎತ್ತುವಾಗ)***

**ಮಾರವಿ - ಏಕ**
ಮತ್ತೇಭವನೇರುತ್ತಲಿ ವಿಭವದಿ |
ಸುತ್ತಿ ಭರತಖಂಡ ||
ಆತ್ರೇಯಾಶ್ರಮದೊತ್ತಿಲಿ ಬರೆ ಮುನಿ |
ಗೋತ್ರಾರಿಯ ಕಂಡ || 27 ||

**ಆರ್ಯಸವಾಯ್ - ಏಕ**
ನಾಗವರೂಥನೆ ಸ್ವಾಗತ ಸ್ವಾಗತ |
ಆಗಮಿಸಲು ಬೇಕಾಶ್ರಮಕೆ ||
ಹೀಗೇನಚ್ಚರಿ ಮಂತ್ರಾಗಮಿಗಳು |
ಯೋಗವು ನಮ್ಮದು ಸಂಭ್ರಮಕೆ || 28 ||
ಪಾವನವಾದುದು ಪುಣ್ಯಾಶ್ರಮವಿದು |
ದೇವೋತ್ತಮ ನೀ ಬರಲಿಂದು ||
ಈ ವಿಧ ಪ್ರತ್ಯಕ್ಷಾನುಭವಾರ್ಚನೆ |
ಕೋವಿದ ಸ್ವೀಕರಿಸೈ ಬಂದು || 29 ||

**ಭಾಮಿನಿ**
ಋಷಿಗಡಣವಾಸಕ್ತಿಯಿಂದೀ |
ಕ್ಷಿಸುತ ಕರೆಯಲು ಗೌರವದಿ ಸುಮ |
ನಸರೊಡೆಯನವರುಗಳಹಂಕಾರದೊಳುಪೇಕ್ಷಿಸುತ ||
ಕೊಸರಿ ಗಜಮಂ ನಡೆಸೆ ಕಾಣುತ |
ಉಸುರಿದನು ಮುನಿನಾಥ ದೇವ |
ಪ್ರಸರದೊಡೆಯನೆ ಸರಿಯೆ ನಿನಗೀ ನಡೆಯು ಪೇಳೆನುತ || 30 ||

**ತೋಡಿ - ಅಷ್ಟ**
ಏನಯ್ಯ | ಇಂದ್ರ || ಏನಯ್ಯ ||
ಏನಯ್ಯ ಇಂದ್ರ ನೀ ಬಾನಲ್ಲಿ ನಿಂತೆ |
ಮಾನಿಸಿ ಕರೆಯಲಹಂಕಾರವಾಂತೆ ||
ಜ್ಞಾನ ಮೂಲಕೆ ಗೌರವವ ನೀಡದಂತೆ |
ಏನವಸರವಯ್ಯ ಹೀನತೆ ಬಂತೆ || 31 ||
ಸ್ಥಾನಾಪನ್ನನು ನಾನು ಮೂಲೋಕದೊಡೆಯ |
ಮಾನಿಸುವರ ದಂಡು ಬಲುದೊಡ್ಡದಯ್ಯ ||
ಮಾನವರೊಳಗೋರ್ವ ಸಾಮಾನ್ಯ ಗೊರವ |
ನೀನೇಂ ಬ್ರಹ್ಮರ್ಷಿಯೆ ಪಡೆಯೆ ಗೌರವವ || 32 ||

**ಕೇದಾರಗೌಳ - ಅಷ್ಟ**
'ಅನ್ಯೋನ್ಯ ಗುರವಃ ವಿಪ್ರಾಃ' ಎಂಬುದು ಶಾಸ್ತ್ರ |
ಮಾನ್ಯ ಸಾಮಾನ್ಯರೆಂದು ||
ಅನ್ನವೇ ಹವಿಯಾದ ದೇವರ್ಕಳೊಡೆಯನೆ |
ಚೆನ್ನವೆ ನಿನ್ನ ಮಾತು || 33 ||
ಆಳುವವಗೆ ಬಲು ಕೀಳು ನಡೆಗಳಿರೆ |
ಕೇಳುವುದಾರನೀಗ ||
ಮೂಲೋಕದೊಡೆಯನಿಂತೇಳಿದನಾದರೆ |
ಪಾಲಿಪರಾರೀಜಗ || 34 ||
ಗುರು ಬೃಹಸ್ಪತಿ ಮತ್ತೆ ಸಪ್ತರ್ಷಿಗಳ ಮಾತ |
ನೆರೆನಂಬಿ ನಡೆವೆ ನಾನು ||
ಧರಣಿಯ ಸಾಮಾನ್ಯ ಮನುಜರೇಂ ಘನವೆಂದು |
ತೆರಳಲುದ್ಯುಕ್ತನಾದ || 35 ||

**ಮಾರವಿ - ಏಕ**
ಮಾನವರತಿ ಸಾಮಾನ್ಯರೆ ನೀ ಸು |
ಜ್ಞಾನಿಯೆ ಸುರಪಾಲ ||
ಸ್ಥಾನಾಪನ್ನತೆಗೀನಡೆ ಯೋಗ್ಯವೆ |
ಹೀನನೆ ಕೆಡುಗಾಲ || 36 ||
ಧರಣೀಶ್ವರನಿಂ ಸೋಲುತ ಸ್ವರ್ಗದ |
ಸಿರಿಸಂಪದವಳಿದು ||
ಪರಿಭವಗೊಳ್ಳೆನುತಿತ್ತನು ಶಾಪವ |
ನುರಿಯುತ ಮುನಿ ಮುಳಿದು || 37 ||

**ಭಾಮಿನಿ**
ತಾಪಸೋತ್ತಮನಿತ್ತ ಕೋಪದ |
ಶಾಪವಾಕ್ಯದ ಹಿರಿಮೆಯರಿಯ |
ಲ್ಕಾಪುರಂದರಗೇರ್ದ ಮತ್ತವಘಟಿಸಿತೇನೆಂಬೆ ||
ಆಪುದೇನೆಂದವನುಪೇಕ್ಷಿಸಿ |
ಪೋಪುದಂ ಕಾಣುತ್ತ ಮುನಿ ಮಂ |
ತ್ರಾಪಮಂ ಪಿಡಿದೆತ್ತಿ ಭೂಪನ ಮೊಗವನೀಕ್ಷಿಸಲು || 38 ||

**ಕೇದಾರಗೌಳ - ಝಂಪೆ**
ಸುತರಿಲ್ಲವೆಂಬ ಚಿಂತೆ | ಬಾಧಿಸಲು |
ವ್ರತಿಯೆ ಸೇವೆಯೊಳು ನಿಂತೆ ||
ಗತಿದೋರಿ ರಕ್ಷಿಸುವುದು | ಪುತ್ರನಿಂ |
ದತಿ ಹಿತವು ಸಾಮ್ರಾಜ್ಯವು || 39 ||
ಜನಿಸುವನು ಸುತನೋರ್ವನು | ಭೂತಳದ |
ಜನಪರೊಳು ಖ್ಯಾತನಹನು ||
ಘನತೆಯಿಂ ಸಾಮ್ರಾಜ್ಯವ | ವಿಸ್ತರಿಸಿ |
ಮನುಕುಲೇಶ್ವರನೆನಿಸುವ || 40 ||
ಕಾಂತಿಮತಿಗುದಿಪ ಕುವರ | ಅಗ್ರಜನ |
ನಾಂತಹನು ಬವರವೀರ ||
ಮುಂತೆನ್ನ ಶಿಷ್ಯತ್ವದಿ | ಬೆಳೆಸುವೆನು |
ನೀಂ ತೆರಳು ಪುರಕೆ ಜವದಿ || 41 ||

**ವಾರ್ಧಕ**
ಹರಕೆಯಂಗೊಂಡು ನೃಪನರಮನೆಗೆ ಮರಳಿದಂ |
ಅರಸಿಯರ್ ಬೆಸನಾದರುತ್ಸವಂ ನಾಡ ತುಂ |
ಬಿರುತಿರಲ್ ಜನಿಸಿದರು ಬಾಲಕರು ತೋಷವಂ ದೊರೆ ತಾಳ್ದು ಸಂಭ್ರಮಿಸಿದಂ ||
ಪಿರಿಯಂಗೆ ದುರ್ಜಯಂ ಕಿರಿಯಂಗೆ ಸುದ್ಯುಮ್ನ |
ಗುರುವಚನದಂತೆ ಪೆಸರಿಟ್ಟು ಬೆಳೆಸಿದನವರ |
ದೊರೆಕುಮಾರರ್ ವೃದ್ಧಿ ಪೊಂದುತಿರೆ ಪಿರಿಯನೊಳು ಕ್ರೌರ್ಯಗುಣವಧಿಕವಾಯ್ತು || 42 ||

**ಭೈರವಿ - ರೂಪಕ**
ಬಾಲಲೀಲೆಯಾಳುತನವ ನಾಳ್ವುದು | ಕಷ್ಟ |
ಭೂಲಲಾಮ ಬೆರಗನಾಂತ | ಶೀಲವಂತನಾದ ಭ್ರಾಂತ || ಪ ||
ಆಟವಾಡುತಿರಲು ದೂಡುವ | ಮಕ್ಕಳೊ |
ಕ್ಕೂಟಕಿವನು ಬರದೆ ಕಾಡುವ ||
ಕೀಟಲೆಗಳ ಗೈದು ನಲಿಯುವ | ತನ್ನ ಹು |
ಚ್ಚಾಟವಾಟವೆಂದು ಬಡಿಯುವ || ಬಾಲ || 43 ||

**ದ್ವಿಪದಿ**
ನೃಪಗಾಯ್ತು ಖೇದ ತರಳನ ನಡತೆಯಿಂದ ||
ವಿಪರೀತವೇನೆಂದು ತಿಳಿಯದೈತಂದ || 44 ||
ತರಳರಂ ಕರೆತಂದು ಮಣಿದು ಮಣಿಸಿದನು ||
ಗುರುವೆ ರಕ್ಷಿಪುದೆಂದು ಬಿನ್ನೈಸಲವನು || 45 ||

**ಮಧ್ಯಮಾವತಿ - ಅಷ್ಟ**
ಬರವಿದೇನಯ್ಯ ಭೂಪ | ಕಾಶಿ ಪುರೇಶ ||
ಬರವಿದೇನಯ್ಯ ಭೂಪ ||
ತರಳರನ್ನೊಡಗೊಂಡು ಬಂದಿಹೆ |
ಭರಿತ ತೋಷವು ಪುತ್ರ ಸಂತತಿ |
ಕೊರತೆ ನೀಗಿಸಿ ನಿನ್ನ ಚಿಂತೆಯ |
ಪರಿಹರಿಸೆ ಮೇಣೇನು ಕೊರತೆಯು || 46 ||
ಧನ್ಯನಾದೆನು ಗುರುವೆ | ಸಂತತಿ ಪೊಂದ |
ಲೆನ್ನುವಾಶಿಷದೊಲವೆ ||
ಎನ್ನ ಸತಿಯರು ಧರಿಸಿ ಗರ್ಭವ |
ಹೊನ್ನ ಪುತ್ಥಳಿಯಂಥ ಬಾಲರ |
ನಿನ್ನು ಪೆತ್ತರು ರಾಜ್ಯ ಸುಖಿಸಂ |
ಪನ್ನವಾಯಿತು ಜನ್ಮ ಸಾರ್ಥಕ || 47 ||
ಆತ್ರೇಯ ಮುನಿವರ್ಯನೆ | ಅಂಕುರಿಸಿತೊಂ |
ದಾತಂಕ ಪಿರಿಯವನೆ ||
ಮಾತ ಕೇಳನು ದೌಷ್ಟ್ಯವೀತನೊ |
ಳಾತುಕೊಂಡಿಹುದೇತಕರಿಯೆನು |
ಘಾತವೆಮ್ಮನ್ವಯಕೆ ತಾಮಸ |
ರೀತಿ ಕ್ಷಾತ್ರಕೆ ರಾಜದಂಡಕೆ || 48 ||

**ಮಧ್ಯಮಾವತಿ - ತ್ರಿವುಡೆ**
ಚಿಂತಿಸುತ ಮುನಿಯಂತರಂಗದಿ |
ಇಂತು ಘಟಿಸಿತವಜ್ಞೆಯಾ ಸುರ |
ಕಾಂತನಂ ಶಪಿಸುತ್ತ ಸಾಂತ್ವನ |
ವಾಂತುಕೊಳ್ಳದೆ ತಪ್ಪಿದೆ || ದೋಷವಾಯ್ತು || 49 ||
ತಾಮಸಿಯು ನಾನಾದೆ ಶಪಿಸುತ |
ಭೂಮಿಪತಿ ನಿನಗಾ ಸ್ವಭಾವದಿ |
ಕಾಮಿತಾರ್ಥವನಿತ್ತೆನದರಿಂ |
ದೀಮಗನು ಕಾಠಿಣ್ಯನು || ಮರುಕ ಬೇಡ || 50 ||
ತಪದ ಬಲದಿಂದಿವನ ಭಾವವ |
ನುಪಶಮನಮಂಗೈದು ವಿದ್ಯಾ |
ನಿಪುಣನಂ ಮಾಡುತ್ತ ಕಳುಹುವೆ ।
ನೃಪತಿ ನೀ ಚಿಂತಿಸದಿರು || ತರಳರಿರಲಿ || 51 ||

**ದ್ವಿಪದಿ**
ಗುರುಮನೆಯೊಳವರನುಳಿಸುತ ಭೂಪ ತೆರಳೆ ||
ಸರಿದುದೈ ಕೆಲಕಾಲ ವಿದ್ಯೆಯಿಂದರಳೆ || 52 ||
ಯಜ್ಞಬಲದಿಂದಲುಗ್ರತೆಯನಳಿಸುತಲಿ ||
ಸುಜ್ಞಾನವಿತ್ತು ಗುರು ಪೇಳ್ದನೊಲವಿನಲಿ || 53 ||

**ಭೈರವಿ - ಝಂಪೆ**
ನೀತಿಯಂತಾಳುತ್ತ ಭೂತನಾಥನ ದಯದಿ |
ಖ್ಯಾತರಾಗಿರಿ ಪ್ರಜಾ ಪ್ರೀತಿಯಂ ಗಳಿಸಿ || 54 ||
ಕ್ಷಾತ್ರತೇಜದಿ ಮೆರೆದು ಧಾತ್ರಿಯಂ ರಕ್ಷಿಸಲು |
ಆತ್ರೇಯ ಛಾತ್ರತೆ ಕೃತಾರ್ಥಮಾಗುವುದು || 55 ||
ಹರಸಿ ಬೀಳ್ಕೊಡಲವರು ಗುರು ಕರುಣ ಕವಚಮಂ |
ಧರಿಸಿ ಪುರಕೈತರಲು ಮೆರೆಯೆ ಶುಭದೊಸಗೆ || 56 ||

**ಸೌರಾಷ್ಟ್ರ - ತ್ರಿವುಡೆ**
ಪಿರಿಯ ದುರ್ಜಯನಿಂಗೆ ಪಟ್ಟವ |
ವಿರಚಿಸುತ ಸೇನಾಧಿಪತ್ಯವ |
ಕಿರಿಯ ಸುದ್ಯುಮ್ನನಿಗೆ ನೀಡುತ | ಲೊರೆದು ನೀತಿ || 57 ||
ಸ್ವಸ್ಥಮನ ಸತಿ ಸಹಿತ ವಾನ |
ಪ್ರಸ್ಥಮಂ ಕೈಗೊಳ್ಳುತಲೆ ಪ್ರಾ |
ಶಸ್ತಮಾಗಿಹ ಚಿತ್ರಕೂಟ ವ | ನಸ್ಥನಾದ || 58 ||

ಅನುಜ ಸಹ ವೈಭವದಿ ಪಟ್ಟದ |
ಮಣೆಯನೇರುತಲಾಳಿ ಧರಣಿಯ |
ಜನಪರನು ವಿಕ್ರಮದಿ ಗೆಲ್ಲುತ | ಮಣಿಸಿ ಮೆರೆದು || 59 ||
ವಾಹಿನಿಯ ಬಲಗೊಳಿಸಿ ಲೋಕವ |
ಬೇಹಿನಿಂ ತಿಳಿದಾಳುತಿರ್ದನು |
ಮೋಹರಕ್ಕೆದುರಾಳಿಗಳೆಯಿ | ಲ್ಲಾಹವದೊಳು || 60 ||

**ಕಾಪಿ - ಅಷ್ಟ**
ತಮ್ಮ ಕೇಳೆಮ್ಮ ಸಾಹಸವು | ಭುವಿ |
ಯಂ ಮೀರಿ ಬೆಳೆದುದು ವಿಜಯ ವೈಭವವು ||
ಹೆಮ್ಮೆಯಿಂ ಹರಿ ಕುರುವರ್ಷ | ನಾವ್ ಸು |
ದ್ಯುಮ್ನನೆ ಗೆದ್ದೆವು ಭಾರತವರ್ಷ || 61 ||
ಅಣ್ಣ ಕಿಂಪುರುಷ ವರ್ಷವನು | ಸೈನ್ಯ |
ವನ್ನೈದಿಸುತ ಗೆದ್ದು ರೋಮಾವತವನು ||
ಉನ್ನತ ಭದ್ರಾಶ್ವಖಂಡ | ಗೆದ್ದೆ |
ವಿನ್ನಿಳಾವರ್ತವ ವಿಜಯವಖಂಡ || 62 ||

**ಸಾಂಗತ್ಯ - ರೂಪಕ**
ಮೆರೆವ ಸಪ್ತದ್ವೀಪ ದೊರೆಕೊಂಡುದಿಂದಿಗೆ |
ಪಿರಿಯಾಸೆ ಮನಕಾಯ್ತು ತಮ್ಮ ||
ವರಸುಮೇರುವನೇರುತಮರಲೋಕವ ಸೇರಿ |
ಧುರವ ಗೈದರೆ ಪೂರ್ಣ ವಿಜಯ || 63 ||
ಅಪ್ಪುದು ತಪ್ಪೇನು ಸೈನ್ಯವನಾಯುತ್ತ |
ಲೊಪ್ಪಗೊಳಿಪೆನಾನಗ್ರಜನೆ ||
ಕ್ಷಿಪ್ರದಿಂ ಜೈತ್ರ ಯಾತ್ರೆಯಗೈದು ಮನುಜರೊ |
ಳಪ್ರತಿಮತ್ವ ಸ್ಥಾಪಿಸುವ || 64 ||

**ತುಜಾವಂತು - ಝಂಪೆ**
ಹರಿಯ ನಾಮಾಮೃತವ ತುಂಬಿ ಮಹತಿಯ ಮಿಡಿದು |
ಪರಮ ಭಕುತರ ಭಾವ ಲಹರಿಯಂ ಮೀಟಿ ||
ಕರಣ ಪೀಯೂಷ ನಾದಾವರಣ ನಿರ್ಮಿಸುತ |
ಸುರಮುನಿಪ ನಾರದನು ದಿವಕೇರಿ ಬಂದ || 65 ||

**ಶಂಕರಾಭರಣ - ರೂಪಕ**
ಬಂದು ವಂದಿಸುತ್ತ ದೇವ |
ವೃಂದ ಸಹಿತಲನಿಮಿಷೇಶ |
ಚಂದವಾಯ್ತು ಮುನಿಯೆ ಲೋಕ | ದಂದವೆಂತಿದೆ ||
ನಿಂದು ನಿಲದೆ ಮೂರುಲೋಕ |
ಕೆಂದು ಕುಂದು ಬಾರದಂತೆ |
ಒಂದಕೊಂದ ಹೊಂದಿಸುತ್ತ | ಲಂದ ಕಾಂಬಿರಿ || 66 ||
ಲೋಕ ಲೋಕ ಸುತ್ತುವವಗೆ |
ನಾಕವೇನು ನರಕವೇನು |
ಶ್ರೀಕರನ್ನ ನಾಮವೊಂದೆ | ಸಾಕು ರಕ್ಷೆಗೆ ||
ನಾ ಕಕುಭವ ಸುತ್ತುತಿರಲ |
ನೇಕರಿಂದ ಕೇಳ್ದೆನೊಂದ |
ಪಾಕಶಾಸನನ್ನ ಗೆಲುವ | ವಾಕು ಬಂದುದ || 67 ||

**ಶಂಕರಾಭರಣ - ರೂಪಕ (ಪ್ರಭೇದ)**
ಮುನಿಯೆ ಬೆರಗನಾಂತೆ ನಿಮ್ಮ | ಮನದ ಮಾತಿಗೆ |
ದನುಜರಾರು ಬಹುದ ಕಾಣೆ | ನೆನುವ ವಾರ್ತೆಗೆ ||
ಮನದೊಳಾಂತೆ ನೆಮ್ಮದಿಯನು | ಮುನಿದು ಬರುವರು |
ಇನಿತು ಶೌರ್ಯವಾರಿಗುಂಟದೆನಗೆ ಪೇಳ್ವುದು || 68 ||

**ಬೇಗಡೆ - ಏಕ**
ಆಲಿಸೆಲೆ ಸುರಪಾಲ ಸಂಗತಿಯ | ದಾನವರ ದೌಷ್ಟ್ಯದ |
ಕಾಲವಲ್ಲಿದು ಮನುಜಪತಿ ಕಥೆಯ ||
ಪೇಳಲೇನೈ ದುರ್ಜಯಾಖ್ಯ ವಿ |
ಶಾಲ ಸಪ್ತ ದ್ವೀಪಮಂ ಗೆಲಿ |
ದೇಳಿಗೆಯ ಮನದಿಂದಲೀ ತ್ರಿದ |
ಶಾಲಯವ ಗೆಲೆ ಮನವ ಮಾಡಿದ || 69 ||

ತಮ್ಮನಿಹ ಸುದ್ಯುಮ್ನ ನಾಮಕನು | ಬಲು ಭಟನು ಗೆಲ್ಲುತ |
ಹೊಮ್ಮಿಸುತ ಕೀರ್ತಿಯನು ಬೆಳೆದಿಹನು ||
ನೆಮ್ಮುತಿವರಾಶ್ರಯವ ಲೋಕದ |
ಹೆಮ್ಮೆಯರಸರು ಬಳಿವಿಡಿದರೈ |
ಒಮ್ಮನದಿ ಸ್ವರ್ಗಾಭಿಯೋಗಕೆ |
ನೆಮ್ಮದಿಯೆ ನೀನೊಮ್ಮೆ ಯೋಚಿಸು || 70 ||

**ಕಂದ**
ನಾರದನಿಂತೊರೆಯುತ ಶ್ರೀ ।
ನಾರಾಯಣ ನಾಮಮಂ ಸ್ಮರಿಸುತ್ತೈದಲು ತಾಂ ||
ವಾರತೆಗಾತಂಕಿತ ಸುರ |
ವಾರಾಧಿಪ ಸಭೆಯ ನೋಡಿ ಕೋಪದೊಳೆಂದಂ || 71 ||

**ಭೈರವಿ - ಏಕ**
ಭೂಮಿಪನೋರ್ವನಿಗೆಂತು | ಸ್ವ |
ರ್ಧಾಮದ ಗೆಲ್ಲುವ ಭ್ರಾಂತು ||
ತಾಮಸಿಗಳ ದುರ್ಬಯಕೆ | ಸರಿ |
ಯೇ ಮನುಜಗೆ ಬಂತೇಕೆ || 72 ||
ಭೂಲೋಕದ ಗೆಲುವಿಂದ | ನೃಪ |
ಕೀಳಾದನೆ ನಡೆಯಿಂದ ||
ಪೇಳಿರಿ ಶಿಕ್ಷಿಸುವಂದ | ನಿ |
ಮ್ಮಾಲೋಚನೆ ಬರಲೆಂದ || 73 ||

**ಕೇದಾರಗೌಳ - ಝಂಪೆ**
ಅವಧರಿಸು ಸುರಪಾಲಕ | ಭೂಪತಿಯ |
ಬವರವೆಮಗೇಂ ಕಾಯಕ ||
ಕವಿದು ಬರಲವನ ಕಟಕ | ಸಮರದಲಿ |
ಸವರಿತಹೆನೆನೆ ಪಾವಕ || 74 ||

**ಮಾರವಿ - ಏಕ**
ಗುಡುಗುಡಿಸುತ ಯಮ ನುಡಿದನು ಮಾನುಷ |
ಗಡಣವು ಬರಲೇನು ||
ಬಿಡುಗಣ್ಣರ ದೊರೆ ಬಿಡು ನೀ ಚಿಂತೆಯ |
ಬಡಿದೋಟ್ಟೈಸುವೆನು || 75 ||

**ಭೈರವಿ - ತ್ರಿವುಡೆ**
ವಾತ ನುಡಿದನು ಕೇಳ್ ದಿವೌಕಸ |
ನಾಥ ಮಾನವರಾಗಣ ||
ಆತುಕೊಳುವದಸಾಧ್ಯ ಝಂಝಾ |
ವಾತದುರುಬೆಯನರೆಕ್ಷಣ ||
ಆತಗಳ ನಾವಡ್ಡಗಟ್ಟುತ |
ಘಾತಿಗೊಳಿಸುವ ಪಥದಲಿ ||
ಏತರವನವ ಮನುಜ ಮಾತ್ರನು |
ಸೋತು ಪಿಂದಕೆ ಗಮಿಸಲಿ || 76 ||

**ವಾರ್ಧಕ**
ಸುರಪನಂ ಪೌರುಷ ಪ್ರದರ್ಶನದಿ ಸಂತೈಸೆ |
ನೆರಹಿದಂ ಸಕಲ ಸಮರೋತ್ಸಾಹ ಪಡೆಗಳಂ |
ಅರಸನೈದುವ ಸುಮೇರುವಿನ ಪ್ರಾಂತಕ್ಕಾಗಿ ಸುರಸೈನ್ಯಮೈತಂದುದು ||
ದೊರೆ ದುರ್ಜಯಂ ತನ್ನ ಮೋಹರವನೊಡಗೊಂಡು |
ಪೊರಡಲುದ್ಯುಕ್ತನಾಗಿರುವ ಸಮಯದೊಳರಿತು |
ನಿರತ ಸಂತೋಷಮಂ ಗೈಯ್ಯುವೇಳ್ಕೆನ್ನುತ್ತ ಪರಮಾಪ್ತನಂ ಕರೆಸಿದ || 77 ||

**ಝಿಲ್ಲಾನಿ - ಅಷ್ಟ**
ಗೆಳೆಯನೋರುವನಿಹ ಹಂಸ | ಜೊತೆ |
ಗೊಳುವನು ತಿಳಿದಿಹ ಕಲೆಗವತಂಸ ||
ಲಲಿತವಾಗ್ವಿದನು ಪ್ರಶಂಸ | ವಾದ್ಯ |
ಗಳ ನುಡಿಸಲು ಬಲ್ಲ ನಾಟ್ಯ ವಿದ್ವಾಂಸ || 78 ||
ಕರೆದ ಬಾರೈ ಹಂಸ ಗೆಳೆಯ | ಯುದ್ಧ |
ನಿರತವಾಗಿರೆ ಹಿಂಸೆಗೊಳಗಪ್ಪ ಪರಿಯ ||
ಅರಿತು ನೀ ನಿನ್ನವರ್ಗೊಡಿ | ಪರಿ |
ಪರಿಯೊಳು ರಚಿಸುತ್ತಲಿರು ಕಲಾಪ್ರೌಢಿ || 79 ||

ಯಕ್ಷಗಾನವು ಮೊದಲಿರಲಿ | ಸರ್ವಾ |
ಪೇಕ್ಷೆಯು ಭರತ ನಾಟ್ಯವು ಮೇಳಗೊಳಲಿ ||
ಸೂಕ್ಷ್ಮ ಸಂವೇದಿ ಸಂಗೀತ | ಸುಖ |
ವೈ ಕ್ಷಣ ಕ್ಷಣಕು ರೂಪಕ ಮೇಳಗೀತ || 80 ||

**ಕಲ್ಯಾಣಿ - ರೂಪಕ**
ದೊರೆಯೆ ನಿನ್ನ ವಚನಮುಚಿತವು | ಗಾಂಧರ್ವವೇದ |
ವರಳಿಸುವುದು ಮನವ ನಿತ್ಯವು ||
ವರಸುನಾಟ್ಯ ವಾದ್ಯ ಘೋಷ |
ಸರಸ ಸುಖದ ಹಾಸ್ಯ ವೇಷ |
ವಿರಚಿಸಲ್ಕೆ ಯೋಧರಿಂಗೆ |
ಮರಳಿ ಬಹುದುತ್ಸಾಹ ದೊರೆಯೆ || 81 ||

**ಸೌರಾಷ್ಟ್ರ - ತ್ರಿವುಡೆ**
ದೈತ್ಯಪತಿ ವಿದ್ಯುತ್ತನೆಂಬನು |
ಮತ್ತವನ ಸೋದರ ಸುವಿದ್ಯುತ |
ವಾರ್ತೆಯರಿತರು ಜೈತ್ರ ಯಾತ್ರೆಯ | ಪೃಥ್ವಿಪತಿಯ || 82 ||
ಕೇಳಿದೈ ಸಹಭವನೆ ಕಾಶೀ |
ಪಾಲ ದುರ್ಜಯ ದೇವತೆಗಳೊಳು |
ಕಾಳಗಕೆ ಮನಗೈದುದೆಮಗನು | ಕೂಲವಾಯ್ತು || 83 ||
ಅಣ್ಣ ನಾವೀಗಾನೃಪೋತ್ತಮ |
ನನ್ನು ಕಾಣುತ ಸಖ್ಯವೆಸಗಲು |
ಮನ್ನಣೆಯು ಮೂಲೋಕದೊಳು ಸಂ | ಪನ್ನರಹೆವು || 84 ||
ಧರಣಿಪತಿಯತಿ ಬಲನು ಸ್ನೇಹದಿ |
ಭರಿತ ಬಲವೆಮಗಹುದು ಪೋಗುವ |
ಕೊರತೆಗಾಣದೆನುತ್ತ ಪೊರಟರು | ಹರುಷದಿಂದ || 85 ||

**ಕೇದಾರಗೌಳ - ಅಷ್ಟ**
ಹೋ ಹೋ ಎನುತ ಬಾಹುವೆತ್ತಿ ಸಂತೋಷದಿ |
ಸ್ನೇಹ ಮುದ್ರೆಯ ತೋರುತ ||
ಸಾಹಸಿಗಳೆ ನಮೋ ಬಾಹುಜರೊಳು ನಿಮ್ಮಂ |
ತಾಹವಮಲ್ಲರಿಲ್ಲ || 86 ||
ತಮ್ಮ ಕೇಳವರಾರು ದಾನವ ಕುಲಜರು |
ನಮ್ಮ ಮೆಚ್ಚಿಸುವಂತಿದೆ ||
ನೆಮ್ಮಬಾರದು ಪೂರ್ಣ ತಿಳಿದು ಬಾರೆನಲು ಸು |
ದ್ಯುಮ್ನನವರ ಕೇಳಿದ || 87 ||

**ಮಧುಮಾಧವಿ - ಏಕ**
ಅಸುರ ಕುಲೋದ್ಭವರಾರಯ್ಯ ನೀವು |
ಕುಶಲವೇನೆಲ್ಲಿಹುದೈ ನಿಮ್ಮ ಠಾವು ||
ಅಸಮ ವಿಕ್ರಮಿಗಳಂದದಿ ತೋರ್ಪಿರಲ್ಲ ||
ಪೆಸರೇನು ಹೊಸಪರಿ ಪೇಳುವುದೆಲ್ಲ || 88 ||
ದೈತ್ಯಾನ್ವಯವು ವೀರ ವಿದ್ಯುತ್ತೆನ್ನುವರು |
ಮತ್ತೀತನನುಜ ಸುವಿದ್ಯುತ್ತು ಪೆಸರು ||
ಸತ್ವದಿಂ ಕೆಣಕುತ್ತ ಸುರರಿಂದ ಸೋತು |
ಗೊತ್ತು ಗುರಿಯು ನಾಡು ನೆಲೆಯಿಲ್ಲದಾಯ್ತು || 89 ||
ಕೇಳಿ ವಾರ್ತೆಯ ನಿಮ್ಮ ಪರಮ ಪೌರುಷವ |
ತಾಳಿ ತೋಷವ ಬಂದೆವ್ ಬಯಸುತಾಶ್ರಯವ ||
ಪಾಲಿಸಬೇಕೆಮ್ಮನೆಂದು ಬೇಡುವೆವು ||
ಶೀಲರೆ ಸಖ್ಯ ಸಹಾಯಕಾಗುವೆವು || 90 ||

**ಭಾಮಿನಿ**
ಆದರಿಸುತ ಸಹೋದರರ ಬಳಿ |
ಗೈದಿ ದುರ್ಜಯನಿತ್ತು ಪೀಠವ |
ಮೋದದಿಂ ಸತ್ಕರಿಸಿ ಪೂರ್ವಾಪರ ವಿಚಾರಿಸುತ ||
ಸಾಧಕರೆ ನೀವ್ ಸೋತರೇ ನಾ |
ವಾದಪೆವು ನಿಮ್ಮೊಲವ ಪೇಳಿರಿ |
ಭೇದ ನಮ್ಮೊಳಗಿಲ್ಲ ಸ್ನೇಹಾಚಾರ ಸುಖವೈಸೆ || 91 ||

**ಸೌರಾಷ್ಟ್ರ - ಮಟ್ಟೆ**
ವಿಕ್ರಮಾರ್ಜಿತ ವೀರರೆನ್ನುತ |
ಚಕ್ರವರ್ತಿಯ ಚರಣಕೆರಗುತ |
ಶಕ್ರನಿಂದಲಿ ಸಮರ ಮುಖದಲಿ ||
ಸಿಕ್ಕು ನರಳಿತು ಸೈನ್ಯ ಸೋತಿತು || 92 ||
ನಿಮ್ಮ ವಾರ್ತೆಯ ಕೇಳಿ ನಂಬುತ |
ನಮ್ಮ ಕಷ್ಟವು ನಶಿಸಿತೆನ್ನುತ |
ನೆಮ್ಮಿ ಬಂದೆವು ಬದುಕ ಕಲ್ಪಿಸಿ |
ಹೆಮ್ಮೆಗುಚಿತದ ನೆಲೆಯ ತೋರಿಸಿ || 93 ||

**ಸುರುಟಿ - ಏಕ**
ವೀರರೆ ಮೆಚ್ಚಿದೆನು | ಸ್ವರ್ಗದ |
ದಾರಿ ಸುಲಭವಿನ್ನು ||
ಪೌರುಷ ಸಾಹಸ ಸೇರಿತು ನಮ್ಮೆಡೆ |
ಭೂರಿ ಬಲರೆಯುಪಕಾರಿಗಳಾದಿರಿ || 94 ||

**ಸೌರಾಷ್ಟ್ರ - ತ್ರಿವುಡೆ**
ಲೋಕ ತಲ್ಲಣಿಸಿದುದು ಸೇನಾ |
ನೀಕ ಶರಧಿಯೊಲುಬ್ಬಿ ಪೊರಡಲು |
ನಾಕವಿಜಯ ಸುಮೇರುವೇರ್ವಮ | ಹಾಕುಶಲರು || 95 ||
ಬರುವ ಸೇನಾಶರಧಿಗೊಡ್ಡನು |
ಸುರರು ಕಟ್ಟಿದ ತೆರದಿ ಘಟ್ಟಿಸೆ |
ಭರಿತ ಸಮರೋತ್ಸಾಹ ಮೆರೆದುದು | ನರ ಸುರರಿಗೆ || 96 ||

ಅಗ್ನಿ x ಸುದ್ಯುಮ್ನ

**ಕೇದಾರಗೌಳ - ಝಂಪೆ**
ಸುರಲೋಕದಭಿಯೋಗಕೆ | ಮನುಜರಿಂ |
ತರಿತರಿದು ಪೊರಟಿರೇಕೆ ||
ಧರೆಯ ಕ್ಷೇಮದಿ ಪೊರೆಯುವ | ಹೊಣೆಯರಿತು |
ಮರಳಿಪೋದರೆ ಗೌರವ || 97 ||
ಪೌರುಷಕೆ ಪಾರವೆಲ್ಲಿ | ಕ್ಷಾತ್ರಬಲ |
ತೋರುವೆವು ನಾಕದಲ್ಲಿ ||
ವೀರರೆಮ್ಮದಟು ಜಗದಿ | ಮೆರೆದಿಹುದು |
ಸಾರಿ ಶರಣಾಗಿ ಜವದಿ || 98 ||

ವಾಯು x ವಿದ್ಯುತ್

**ಭೈರವಿ - ಏಕ**
ಮಾರುತ ತಡೆಯುತಲೆಂದ | ನರ |
ವಾರದೊಡನೆ ನೀ ಬಂದ ||
ಕಾರಣವರುಹುತ ತೆರಳು | ಬಿಡೆ |
ಕ್ರೂರ ದನುಜ ಕೊಡು ಕೊರಳು || 99 ||
ಹವಿಯನ್ನವನುಂಬರಿಗೆ | ಮಾ |
ನವರೆಂದರೆ ಬಲು ಸಲುಗೆ ||
ಬವರಕೆ ಬಂದಿಹರವರು | ನಾ |
ವರಿತೈತಂದ ದನುಜರು || 100 ||

ಯಮ x ಸುವಿದ್ಯುತ್

**ನಾದನಾಮಕ್ರಿಯೆ - ಅಷ್ಟ**
ಹಿಂದೆ ಸೋತೋಡಿದ ಪಾತಕಿ | ಮತ್ತೆ |
ಬಂದೆಯ ಲೋಕ ವಿಘಾತಕಿ ||
ಕೊಂದು ಕಳೆವೆ ಕುಂಭಿಪಾಕದಿ | ಬಿದ್ದು |
ಬೆಂದು ಪೋಗುವೆ ಗದಾಘಾತದಿ || 101 ||
ಗೆದ್ದ ಭೂಪನು ಸಪ್ತದ್ವೀಪವ | ಲೋಕ |
ದುದ್ದಗಲದ ನವಖಂಡವ ||
ಹೊದ್ದಿನಾಕವ ಗೆಲುವಂದವ | ನೋಡೆ |
ಮದ್ದುತ ಸಾಹಸವೆಲ್ಲವ || 102 ||

ಇಂದ್ರ x ದುರ್ಜಯ

**ದೇಶಿ - ಅಷ್ಟ (ಪ್ರಭೇದ)**
ಬಂದೆಯ | ಭೂಪ | ಬಂದೆಯ || ಪ||
ಬಂದೆಯ ಮನುಜ ನೀ ಸ್ವರ್ಗದೈಸಿರಿಯ |
ಹೊಂದುವಾಸೆಯ ಪೊತ್ತು ದೂರ್ತನಾಗಿಹೆಯ || ಅ.ಪ ||
ಇಂದಿನವರೆಗೆ ವಸುಂಧರೇಶ್ವರರು |
ಬಂದುದಿಲ್ಲವು ಯಾಗಯಜ್ಞ ದೀಕ್ಷಿತರು ||
ನಿಂದಿತವಿದು ಜಯ ಪೊಂದದು ನಿಮಗೆ |
ಬಂದಂತೆ ನಡೆ ನಿನ್ನ ರಾಜ್ಯದ ಕಡೆಗೆ || ಬಂದೆಯ || 103 ||
ಕ್ಷಾತ್ರತೇಜದಿ ನಾನು ಗೆದ್ದು ಸ್ವರ್ಗವನು |
ಧಾತ್ರೀಶರಾಕಾಂಕ್ಷೆಯಳವ ತೋರುವೆನು ||
ಗೋತ್ರಾರಿ ಬಲ್ಲೆನೈ ದಾನವರಿಂದ |
ಸೋತು ಸಂಗರದೊಳೋಡಿದ ಬಲು ಚಂದ || 104 ||

**ಸೌರಾಷ್ಟ್ರ - ತ್ರಿವುಡೆ**
ಧರ್ಮದಿಂದಾಳುತ್ತ ಧರಣಿಯ |
ಕರ್ಮಯೋಗಿಗಳೆನಿಸಿ ಪುಣ್ಯದ |
ಹರ್ಮ್ಯವನ್ನೇರುತ್ತ ಬರುವುದು | ನಿರ್ಮಲದಲಿ || 105 ||
ಬಲ್ಲೆನದು ಭಾವಿಸಲು ಸಾಹಸ |
ವಲ್ಲ ನಿನ್ನನು ಕದನ ಮುಖದಲಿ |
ಗೆಲ್ಲುವೆನು ಬಳಿಕೀವೆ ಹವಿ ನೀ | ನಲ್ಲಿ ಬಾರೈ || 106 ||

**ಭೈರವಿ-ಅಷ್ಟ**
ಮಿತಿ ಬೇಕು ಪೌರುಷಕೆ | ಮೂಲೋಕದ |
ಪತಿಯರ್ಹ ಗೌರವಕೆ ||
ಹಿತದಿಂದಲರಿತುನೋಡತಿಯಾಸೆ ಸಲ್ಲದು ।
ನ್ನತಿ ಪತನದ ಹೇತುವು || 107 ||
ಗೆದ್ದೆ ಸಪ್ತದ್ವೀಪವ | ಲೋಕಾಂತರ |
ಹೊದ್ದಿದರತಿ ಗೌರವ ||
ಸಿದ್ಧಿ ಪ್ರಸಿದ್ಧಿ ಸಮೃದ್ಧಿ ನಿನ್ನನು ಹೊದ್ದಿ |
ವೃದ್ಧಶ್ರವನೆ ಗೆಲ್ಲುವೆ || 108 ||

**ಭಾಮಿನಿ**
ಕಾದಿದರು ಸಮಬಲದಿ ಸುರಪತಿ |
ಗಾದುದಪಜಯ ಗುರುವನುಗ್ರಹ |
ದಾಧುರಂಧರ ಶಕ್ತಿಯಿಂದಲಿ ಕುಲಿಶ ನಿಷ್ಕ್ರಮಿಸೆ ||
ಬೋಧವಡಗಿತು ಸುರಪ ಕೈಸೆರೆ |
ಯಾದನಾ ದುರ್ಜಯಗೆ ಮುನಿನುಡಿ |
ಸೇದಿತಾತನಸತ್ವವಡಿಗಡಿಗವನತಿಯ ಪೊಂದಿ || 109 ||

**ಜಂಜೂಟಿ - ಅಷ್ಟ**
ಭಳಿರೆ ಭಳಿರೆ ದೇವರಾಜ | ಮನು |
ಕುಲಜರ್ನಿನ್ನಳವಲ್ಲ ಸಹಜ ||
ಇಳೆಗಿಳಿದೆಮ್ಮೊಳು ಕೊಳುಗುಳಗೈಯುತ್ತ |
ಕಳೆದುಕೊಂಡೈ ಸ್ವರ್ಗಸಿರಿ ಕೈ |
ಚಳಕವಳಿದುದೆ ಬಲವು ಬಳಲಿತೆ || 110 ||
ಬಿಟ್ಟೆ ನಾ ನಿನ್ನನೀಗಿಷ್ಟಕೆ | ಸುರ |
ಪಟ್ಟ ಬಿಟ್ಟೈದು ನಿನ್ನಿಷ್ಟಕೆ ||
ಅಟ್ಟುಳಿಗಿಳಿದರೆ ಕಟ್ಟಿ ಸೆರೆಯೊಳಿಟ್ಟು |
ಮೆಟ್ಟಿ ಮೂಜಗವಾಳಿ ಮೆರೆಯುವೆ |
ದಿಟ್ಟತನ ಬಿಟ್ಟುಳಿದುಕೋ ನಡೆ || 111 ||

**ಕಾಂಬೋಧಿ - ಝಂಪೆ**
ದಾನವರಿಗಿತ್ತು ಸಂಮಾನವನ್ನಧಿಕಾರ |
ಸ್ಥಾನವಂ ಕೊಡುತಲ್ಲಿ ನಿಲಿಸಿ ।।
ಆನಲಮ್ಮುವರಿಲ್ಲ ಧೈರ್ಯದಿಂದಿಹುದೆನ್ನು |
ತಾನರೇಶ್ವರ ತಿರುಗಿ ಪೊರಟ || 112 ||

**ಭಾಮಿನಿ**
ಹೊಂದಿ ಬಲು ವಿಜಯಗಳ ದುರ್ಜಯ |
ನಂದನನುಜನೆ ಬಹು ಸಮಯದಿಂ |
ಬೆಂದುದೆನ್ನಯ ಸೇನೆ ಲೋಕಾಂತರದ ಗಮನದಲಿ ||
ಬಂದೆವೈ ಸೌಂದರ್ಯದಾಗರ |
ಗಂಧಮಾದನಗಿರಿಯ ಸಾನುವಿ |
ಗಿಂದು ವಿಶ್ರಾಂತಿಯಲಿ ಕಳೆಯಲಿ ಬಹುವಿನೋದದಲಿ || 113 ||

**ಸೌರಾಷ್ಟ್ರ - ತ್ರಿವುಡೆ**
ಹಂಸನನು ಕರೆಯುತ್ತ ಕಲೆಗು |
ತ್ತಂಸ ಕೇಳೈ ನಾಟ್ಯಗಾನ ಪ್ರ |
ಶಂಸನೀಯವು ನಡೆಸರಿತ ಸ | ರ್ವಾಂಶಗಳನು || 114 ||

**ವಾರ್ಧಕ**
ಕರೆಸಿದಂ ಗಾಯಕರ ನರ್ತಕರ ಮೇಳಗಳ |
ಪರಿಪರಿಯ ವಾದ್ಯ ವೈಚಿತ್ರ್ಯಮಹ ವೇಷಗಳ |
ಸುರರ ಸಂಪದದ ಸಿರಿ ಹೃದಯವಹ ಯಕ್ಷಲೋಕವ ಕಟ್ಟಿ ನಿಲ್ಲಿಸಲ್ಕೆ ||
ತರುಣಿಯರ ನಾಟ್ಯ ವಾದ್ಯಂಗಳ ಚಮತ್ಕಾರ |
ವರಸೆ ವರಸೆಯಲಿ ವಾದನದ ಕಲೆ ಕುಸುರಿಯಲಿ |
ಚರಣಗತಿಯಾಂಗಿಕಾಹಾರ್ಯ ಸಾತ್ವಿಕ ವಾಚಿಕಂಗಳಿಂ ರಂಜಿಸಿದರು || 115 ||

**ಭೈರವಿ - ತ್ರಿವುಡೆ**
ಮದನನೆತ್ತಿದ ಹೆದೆಯ ಹೂವೆನೆ ಮೃದು ಮದಾಲಸ ಯಾನೆಯರ್ |
ಪದ ವಿಲಾಸದಿ ಹಂಸ ಗಜ ಮಂಡೂಕಗತಿಯೊಳಗಾಡಿದರ್ ||
ಮೃದುಲವಾಲೋಕಿತ ನಿಮೀಲಿತ ಸೂಚಿ ಸಮದೃಷ್ಟಿಗಳೊಳು |
ಚದುರೆಯರು ನವರಸ ವಿಲಾಸದೊಳಭಿನಯವ ವಿಧ ವಿಧದಿ ತೋರ್ದರು || 116 ||

**ಭಾಮಿನಿ**
ಗೆಳೆಯ ಸಹಿತಾ ದುರ್ಜಯನು ಬಳಿ |
ಕಿಳೆಯ ಸೊಬಗಂ ಸವಿಯುತೈತರೆ |
ತಳಿರ ಗಿರಿವನ ವೃಕ್ಷ ಮೃಗಪಕ್ಷಿಗಳ ಕಲರವವ ||
ನಲಿವ ಜಿಂಕೆಯ ನವಿಲು ಹಂಸೆಯ |
ಮಿಲನ ಕೇಳಿಯ ಕಂಡನಾ ನೃಪ |
ಬಳಲುತರಿತನು ದೈಹಿಕಾಕಾಂಕ್ಷೆಯನು ಮೊದಲಂದು || 117 ||

**ಮಧ್ಯಮಾವತಿ - ತ್ರಿವುಡೆ**
ಹೋತೃಮುನಿಸಂಭವೆ ಸುಕೇಶಿ ಸು |
ಹೋತೃನಂದನೆ ಮಿಶ್ರಕೇಶಿಯ |
ರರ್ತಿಯಿಂ ವನ ಸೊಬಗನೀಕ್ಷಿಸೆ |
ಮಿತ್ರೆಯರ ಬಹು ಬಳಗವ | ಸೇರಿಸುತ್ತ || 118 ||

**ಸಾರಂಗ - ಅಷ್ಟ**
ಬಾರೆ ಬಾ ಮಿಶ್ರಕೇಶಿ | ಸುಂದರವಾದೀ |
ಭೂರಮೆಯನು ಶೋಧಿಸಿ || ವಿಹಾರದಿಂ |
ವಾರಿ ಕೇಳಿಯ ನಡೆಸಿ |
ಚಾರು ಸುಂದರ ಸೊಬಗನೀಕ್ಷಿಸಿ |
ಹಾರಗೈದು ಸುಗಂಧ ಪುಷ್ಪಗ |
ಳೋರಣಂಗೊಳೆ ಮುಡಿದು ಗಿರಿವನ |
ಸೇರಿ ಸುಖಿಸುವ ಬನ್ನಿರೆಲ್ಲರು || ಬಾರೆ || 119 ||

**ಕುರುಂಜಿ - ಅಷ್ಟ**
ಬಡನಡುವಿನ ಬೆಡಗಿಯರು | ಕೋಲ್ಮಿಂ |
ಚೊಡೆದ ಮದನ ಸಿಂಗಾಡಿಯರು || ಅಂಚೆ |
ನಡೆ ನಾಗಜಡೆ ವಯ್ಯಾರಿಯರು | ಅಕ್ಷಿ |
ಯುಡು ಪಿಕನುಡಿ ಸುಂದರಿಯರು | ಓರೆ |
ಕುಡಿನೋಟ ಮೊಗ ಮಾಟ | ದೊಡತಿಯರೊಡಗೂಡಿ |
ನಡೆದೈದಿ ವನದೇಶ | ದೆಡೆಗಾಗಿ ಬಂದರು || 120 ||

**ಧನ್ಯಾಸಿ - ಏಕ**
ಧುಮ್ಮಿಕ್ಕಿ ನೀರಿಗೆ | ಚಿಮ್ಮುತ ಮೇಲಕೆ |
ತಮ್ಮ ತಮ್ಮೊಳಗೆಳೆದಾಡುತ ||
ಸುಮ್ಮನೆಯಡಗುತಲೆಳೆಯುತ ಕಾಲನು |
ದಮ್ಮು ಕಟ್ಟಿಸಿ ಮುಳುಗೇಳುತ ||
ಹೆಮ್ಮೆಯೊಳಗೆ ಹೊಯ್ದಾಡುತ ಪಿಡಿಯುತ |
ಮುಮ್ಮೊಗ ಹಿಮ್ಮೊಗವೀಜುತ ||
ಹೊಮ್ಮಿಸುತಲೆಗಳನೆರಚುತ ನೀರನು |
ಕೆಮ್ಮನೆ ಕೊಸರುತಲಾಡುತ || ಆಡಿದರೂ ತೋಷದೊಳೂ ।
ಜಲ ಕ್ರೀಡೆಯನೂ ಸುದತಿಯರು || 121 ||

**ಭಾಮಿನಿ**
ವಾರಿಕೇಳಿಯನಾಡಿ ನಾರೀ |
ವಾರಸಹ ಸೋದರಿಯರಲ್ಲಿಯ |
ಪಾರ ಸಂಭ್ರಮ ಸವಿದು ಸೊಕ್ಕಿದ ಸಲಗಗಳ ತೆರದಿ ||
ಚಾರು ತರದಿಂ ಮೆರೆವ ತರುಲತೆ |
ನೀರಝರಿ ಖಗಮೃಗ ವಿಲಾಸದಿ ।
ಸೂರೆಗೊಂಡಿಹ ಸಗ್ಗದಂತಿರೆ ಬಂದರೊಲವಿನಲಿ || 122 ||

**ಸೌರಾಷ್ಟ್ರ - ತ್ರಿವುಡೆ**
ವನವಿಹಾರದೊಳಿಂತು ಲಲನಾ |
ಮಣಿಯರಿರೆ ಬಹುತೋಷದಿಂದಲಿ |
ಜನಪ ದುರ್ಜಯ ನಿಂದು ನೋಡಿದ | ವನಿತೆಯರನು || 123 ||

**ನವರೋಜ - ಏಕ**
ಯಾರಿಹರೀ,, ಪ್ರೌಢಿಯರೂ,, | ಅಹ |
ಮಾರನ ಸಿಂಗಾಡಿಯರು,, ||
ವಾರಿಜಮುಖಿದೊಯ್ಯಾರಿಯರಪ್ಸರ |
ನಾರಿಯರನು ಸಿಂಗಾರಿಯರ್ಮೀರ್ವರು || 124 ||
ಕನ್ನೆಯರಾ,,ವರಿಸಿದರೆ,, | ಈ |
ಜನ್ಮವು ಸಾರ್ಥಕವರರೆ ||
ಪುಣ್ಯದ ಫಲ ಹೆಣ್ಣಾದುದೊ ಹಂಸನೆ ।
ಕಣ್ಣೆದುರಿಹರನು ನುಡಿಸುವುದೆಂತೈ || 125 ||

**ದ್ವಿಪದಿ**
ಲೋಕವನು ಗೆದ್ದವನು ಸೋಲಬೇಡಿಲ್ಲಿ |
ವಾಕಿನಿಂದಬಲೆಯರ ಗೆಲ್ಲ ಬೇಕಿಲ್ಲಿ || 126 ||
ಸೋತೆ ನಾನಿವರ ಸೌಂದರ್ಯ ವಿಭ್ರಮಕೆ |
ಮಾತು ಮೀರಿದ ಬಯಕೆ ಮನವ ತುಂಬಲಿಕೆ || 127 ||
ಸುಂದರಿಯರಿರವ ನೀ ತಿಳಿದು ಮುಂಬರಿದು |
ಸಂದರ್ಭವರಿತು ಮನದಂದವನ್ನರುಹು || 128 ||

**ಖಮಾಚು - ಏಕ**
ಆರು ನೀವು ಶೃಂಗಾರದ ರಮಣಿಯರೆ | ವನ |
ಸೇರಿ ನಲಿಯುವವರೆ || ಆರು || ಪ ||
ಆರಸುತೆಯರಿನ್ನೂರಾವುದು ತಿಳಿಯೆ |
ನೀರೆಯರಿರ ಕಾಂತಾರವಿಹಾರದ |
ಸಾರ ಸವಿದ ಸುಖ ಬೀರುತಲಿದೆ ಮುಖ || ಆರು || 129 ||

**ಜಂಜೂಟಿ - ಅಷ್ಟ**
ಬೆರಗಿನಿಂ ನೋಡಿದರವನ | ರಾಜ |
ಪುರುಷ ಸಲ್ಲಕ್ಷಣಯುತನ ||
ಕರಮುಗಿದರು ತೇಜೋವರರಾರೆಂದರಿಯೆವು |
ವರಮುನೀಂದ್ರರ ತರಳೆಯರು ನಾವ್ |
ಪೊರಟು ಬಂದೆವು ವನವಿಹಾರಕೆ || 130 ||
ಮುನಿ ಹೋತೃಸುತೆ ನಾ ಸುಕೇಶಿ | ಮತ್ತೆ |
ನ್ನನುಜೆ ಸುಹೋತ್ರಜೆಯಹ ಮಿಶ್ರಕೇಶಿ ||
ಘನತೆಯಿಂದಾಳೀರ್ಪ ವನವ್ರತಧರರೆಮ್ಮ |
ನನುದಿನವು ಪೋಷಿಪರು ತಾವಾ |
ರೆನುವುದಂ ತಿಳಿವಿಚ್ಛೆಯಾಗಿದೆ || 131 ||

**ಕುರುಂಜಿ - ಝಂಪೆ**
ತೋಷವಾಯಿತು ಪೇಳಲೇನು | ಕಾಶೀ ।
ದೇಶಪತಿ ದುರ್ಜಯನು ತಾನು ||
ವಾಸವಾದ್ಯರ ಗೆಲಿದ ವೀರ | ಮನದೊ |
ಳಾಸೆಯಾದುದ ಪೇಳ್ವ ನೇರ || 132 ||
ವನದೇಶದೊಳು ನಿಮ್ಮ ನೋಡಿ | ಚಿತ್ತ |
ಮನುಮಥನ ಶರಕಾಯ್ತು ಜೋಡಿ ||
ಮುನಿಕುವರಿಯರೆ ಸೋತೆ ನಿಮಗೆ | ನೀವು |
ಮನಮಾಡೆ ಧನ್ಯನಹೆ ಕಡೆಗೆ || 133 ||

**ಮಧುಮಾಧವಿ - ತ್ರಿವುಡೆ**
ಬೆರಗಿನಿಂ ಬಾಗಿದರು ಲಜ್ಜೆಯ |
ಭರಿಸಲರಿಯದೆ ಸೋತರೀರ್ವರು |
ಚರಣಕೆರಗುತ ತೊದಲುತುಲಿದರು |
ಧರಣಿಪತಿಯೊಳು ಮೋದದಿ || 134 ||
ಭೂರಮಣ ನೀ ರಮಣನಾದರೆ |
ಯಾರು ನಮ್ಮಯ ಭಾಗ್ಯಕೆಣೆಯಹ |
ರೀರುವರನೋರುವನೆ ವರಿಸಲ |
ಪಾರಸಂತಸವಪ್ಪುದು || 135 ||
ತಂದೆಯರನೊಪ್ಪಿಸುತ ಕೈಪಿಡಿ |
ವಂದ ಘನವಹುದಾಶ್ರಮಕೆ ನೀ |
ವಿಂದೆ ಬರುವುದು ಸನಿಹವಿದೆ ನೋ |
ಡೆಂದು ನಮಿಸುತ ಪೊರಟರು || 136 ||

**ಸೌರಾಷ್ಟ್ರ - ತ್ರಿವುಡೆ**
ಬೆನ್ನ ಚಪ್ಪರಿಸಿದನು ಮಿತ್ರನ |
ಇನ್ನು ತಡವೇಕೇಳು ಮುನಿಗಳ |
ಕನ್ನೆಯರು ಮೆಚ್ಚಿದರು ಬಾಬಾ | ರೆನ್ನುತೆಳೆದು || 137 ||
ಅವಸರವು ಬೇಡರಸ ಶಾಸ್ತ್ರದ |
ವ್ಯವಹರಣೆ ಋಷಿಗಳಿಗೆ ಪ್ರಿಯವೈ |
ಕುವರಿಯರ ಕೇಳುವುದು ಗುರು ಗೌ | ರವವು ಸಹಿತ || 138 ||

**ಸಾವೇರಿ - ಅಷ್ಟ**
ಋಷಿಗಳಾಶ್ರಮಕೈತಂದ | ಭೂಪಾಲನು |
ಒಸಗೆಯಂ ಪಿಡಿದು ಬಂದ | ಋಷಿ || ಪ ||
ಹೊನ್ನಿನ ಹರಿವಾಣದಿ | ತಾಂಬೂಲ ಹೂ |
ಹಣ್ಣುಗಳೋರಣದಿ ||
ಚಿನ್ನದ ತೊಡುಗೆ ಮೇಣ್ | ಪಣ್ಯಂಗಳನ್ನಿಟ್ಟು |
ಬಣ್ಣದ ಹೊಸವಸ್ತ್ರವು | ಮೇಲ್ ವಸನವು || ಋಷಿ || 139 ||

**ಕಂದಪದ್ಯ**
ಮಣಿದಂ ಪದತಲಕೊಪ್ಪಿಸಿ |
ಜನಪಂ ಕಾಶೀಶ ತನುಜ ದುರ್ಜಯ ನಾಮಂ ||
ಘನಮಹಿಮರೆ ತಮ್ಮಾಶಿಷ |
ವನುಪಡೆದೈದಲ್ಕೆ ಬಂದೆ ರಕ್ಷಿಪುದೆಮ್ಮಂ || 140 ||

**ಕೇದಾರಗೌಳ - ಝಂಪೆ**
ಶುಭವಾಗಲೇಳು ದೊರೆಯೆ | ಕ್ಷೇಮವೇ |
ತ್ರಿಭುವನದ ಕೀರ್ತಿ ಸಿರಿಯೆ ||
ಉಭಯ ವೀರರ ವಾರ್ತೆಯ | ಕೇಳ್ದವೈ |
ವಿಭವವಿದು ಗೈದ ವಿಜಯ || 141 ||
ಆಸನವನಿತ್ತು ಪರಸಿ | ಕೇಳಿದರು |
ಕಾಶೀಶ ನಮ್ಮನರಸಿ ||
ಆಶ್ರಮಕ್ಕೈತಂದುದು | ಕಾರಣವ |
ನೀ ಸೂಚಿಸೇನೆಂಬುದು || 142 ||

**ಆರಭಿ - ರೂಪಕ**
ಸುಪ್ರತೀಕ ನೃಪಕುಮಾರ ದುರ್ಜಯಾಖ್ಯನು | ಗೆದ್ದ |
ಸಪ್ತದ್ವೀಪದರಸರನ್ನು ಸೋತ ಸುರಪನು ||
ಕ್ಷಿಪ್ರದಿಂದ ಮರಳುತಿರಲು ನಮ್ಮ ರಾಜ್ಯಕೆ | ಬಹಳ |
ಆಪ್ತವಾಯ್ತು ನಿಂದೆವಿಲ್ಲಿ ಜಯವಿಹಾರಕೆ || 143 ||

ಮೋಹಗೊಂಡೆ ಕಂಡೆ ನಿಮ್ಮ ಸುತೆಯರೀರ್ವರ | ವೈ |
ವಾಹವಪ್ಪ ಮನದಿ ಕೇಳ್ದೆ ಸುಂದರೀಯರ ||
ನೇಹದಿಂದಲೊಪ್ಪಿ ತಂದೆಯಂದಿರೊಪ್ಪಿರೆ | ಬಂದ |
ರಾಹೆವೆಂದರದಕೆ ಬಂದೆ ಕೇಳಲಿಲ್ಲಿಗೆ || 144 ||

**ಬೇಗಡೆ - ಏಕ**
ಚಿತ್ರವಿದು ಸುಪವಿತ್ರುವೀ ಬಂಧ | ಬಲು ತೋಷವಾಯಿತು |
ಮಿತ್ರ ನಿನ್ನಯ ಪಿತನು ಕೇಳ್ ಕಂದ ||
ಪುತ್ರರಾವ್ ಸ್ವಾಯಂಭವಂಗೆ ಧ |
ರಿತ್ರಿಯಾಳ್ದೆವು ಜಗವ ಗೆಲ್ದುತ |
ಗೋತ್ರವೈರಿಯ ಕದನದಲಿ ಸ |
ರ್ವತ್ರುಜಯ ನಮಗಾದುದಂದಿಗೆ || 145 ||
ದೂರಿದರು ಸುಮನಸರು ಹರಿಯೊಡನೆ | ಬಂದಾತನೆಮ್ಮೊಳು |
ಹೋರಿದನು ತೂರಿದನು ಚಕ್ರವನೆ ||
ಮಾರಜನಕನ ಘೋರ ಯುದ್ಧದಿ |
ಸಾರಿದುದು ಯಮನೂರ ಸೈನ್ಯವು |
ಪಾರುಗಾಣದೆ ಶರಣುಹೊಕ್ಕೆವು |
ತೋರಿ ಕರುಣೆಯ ಬಿಟ್ಟನೆಮ್ಮನು || 146 ||
ತಂದೆಯಪ್ಪಣೆಯಿಂದ ವೈಭವಕೆ | ದೂರಾಗುತುಳಿದೆವು |
ಬಂದೆವೈ ನಾವ್ ಗಂಧಮಾದನಕೆ ||
ಸಂದುದಿಲ್ಲಿಯೆ ಬಹು ಸಮಯ ಮೇಣ್ |
ನಿಂದು ಮದುವೆಯ ಪಡೆದೆವೀ ಚಲು |
ನಂದನೆಯರನು ವರಿಸಿದರೆ ನಾವ್ |
ಬಂಧ ಮುಕ್ತರು ಸುಂದರಾಂಗನೆ || 147 ||

**ವಾರ್ಧಕ**
ಹರುಷದೊಸಗೆಯು ಮೆರೆಯೆ ಸಕಲ ಪರಿವಾರವೈ |
ತರಲು ಸುಮುಹೂರ್ತದೊಳು ತರುಣಿಯರ ಧಾರೆಯ |
ನ್ನೆರೆದುಕೊಡೆ ಮುನಿವರರ್ ತೋಷದಿಂ ದುರ್ಜಯಂ ನೆರವಿಯಂ ಮನ್ನಿಸಿದನು ||
ಪರಕೆಯಂಗೊಂಡು ಬೀಳ್ಕೊಂಡು ಪುರಕೈತಂದ |
ಕಿರಿಯ ಸುದ್ಯುಮ್ನಂಗೆ ವೈಭವದೊಳುದ್ವಹಂ |
ವಿರಚಿಸುತ ಸಾಮಂತ ನೃಪರನಂಕೆಯೊಳಿಟ್ಟು ಪೊರೆಯುತಿರ್ದಂ ಧರಣಿಯ || 148 ||

**ಶಂಕರಾಭರಣ - ರೂಪಕ**
ಸುರಪ ಸುರರು ಗುರುವು ಸಹಿತ |
ಪರಮ ಪದವೆನಿಪ್ಪ ಕ್ಷೀರ |
ಶರಧಿಗೈದಿ ಹರಿಯ ಪಾದ | ಕೆರಗಿ ದೈನ್ಯದಿ ||
ಸಿರಿಯ ರಮಣ ಕರುಣೆದೋರಿ |
ಪೊರೆವುದೆಮ್ಮ ಸ್ವರವ ಲೋಕ |
ಗುರುವೆ ಪುಣ್ಯ ಪುರುಷ ತ್ರಾಹಿ | ತ್ರಾಹಿ ರಕ್ಷಿಸು || 149 ||

**ಮಧ್ಯಮಾವತಿ - ತ್ರಿವುಡೆ**
ನೊಂದಿರೇ ಸುಮನಸರು ಸುರಪತಿ |
ಬಂದ ದಂದುಗವೇನು ಬಂತಾ |
ರಿಂದಲುಪಹತಿ ದನುಜರಟ್ಟುಳಿ |
ಯಿಂದನೊಂದಿರೆ ಪೇಳ್ವುದು | ಕಷ್ಟವೇನು || 150 ||
ದನುಜರಲ್ಲವು ಮನುಜರಧಿಪನು |
ಜನಪ ಕಾಶೀಪತಿಯು ದುರ್ಜಯ |
ನೆನುವ ತಾಮಸಿಯಾದನೈ ನಾವ್ |
ಕಿನಿಸಿನಿಂ ಕಾದುತ್ತಲಿ | ಸೋತೆವವಗೆ || 151 ||

**ಮಿಶ್ರತೋಡಿ - ಅಷ್ಟ**
ನಸುನಗುತೆಂದನು ಹರಿಯು | ನೀವೀ |
ದೆಸೆಗೆ ಸಂದಿರುವುದಚ್ಚರಿಯು ||
ಪೊಸವಾರ್ತೆಕೇಳ್ದೆನೀದಿವಸ | ಸುಮ |
ನಸರನು ಗೆಲೆ ರಸೆಯರಸ | ನಮ್ಮೊ |
ಳುಸುರಲೈತಂದಿರೆ | ದೆಸೆಗಾಣದಾದಿರೆ |
ಕುಸಿದುದೆ ತೈಜಸ | ಪಸರಿಸೆ ಮಾನುಷ || ನಸುನಗು || 152 ||

ಎಂತಿದು ಸಾಧ್ಯವೊ ಸುರಪ | ನೀತಿ |
ವಂತನಲ್ಲವೆ ಗೆದ್ದ ಕ್ಷಿತಿಪ ||
ಪಿಂತೇನು ನಡೆಯಿತು ಪೇಳು | ಹೊಣೆ |
ಯಾಂತರಿಗತಿ ಸೂಕ್ಷ್ಮಬಾಳು | ವರ |
ವಾಂತರಲ್ಲದೆ ಶಾಪ | ಬಂತಾದರಿದೆ ತಾಪ |
ದಂತಿವಾಹನೆ ತಪ್ಪಿ | ದಂತಿದೆ ನಿಜವೇನು || ನಸುನಗು || 153 ||

**ಸಾಂಗತ್ಯ - ರೂಪಕ**
ಪೂರ್ವದೊಳೊಮ್ಮೆಯಾತ್ರೇಯ ನಾಮದ ಮುನಿ |
ಗರ್ವದೊಳಿತ್ತ ಶಾಪವನು ||
ಉರ್ವಿಯಧಿಪನಿಂದ ಸೋಲಾಗಿ ಸಂಪದ |
ಸರ್ವವೂ ಪೋಗಲೆಂದೊರೆದ || 154 ||
ಸಾಕಲ್ಲವೇನಯ್ಯ ಬ್ರಹ್ಮಶಾಪದ ದೋಷ |
ನಾಕವ ನರ ಗೆಲ್ವ ಮಾತು ||
ಭೀಕರ ನೀನಿದನೇಕುಪೇಕ್ಷೆಯ ಗೈದೆ |
ಪಾಕಶಾಸನ ಕಾಕು ನಡೆಯು || 155 ||
ಸ್ಥಾನಾಪನ್ನತೆಯಿಂದ ಮೇಲೆನಿಸಿದರಿಂದ |
ಮಾನಿಸಲೇಕೆಂದು ಬಗೆದೆ ||
ಮಾನವ ಜಗಕಾನನುಗ್ರಹಿಸುವನೈಸೆ ।
ಹಾನಿಯನೂಹಿಸದಾದೆ || 156 ||

**ಆರಭಿ - ರೂಪಕ**
ತಪದ ಬಲವ ಪದವಿಯೊಡನೆ ತುಲನೆಗೈದೆಯ | ಸುರಪ |
ತಪಸಿಯರಿವು ಪರಮ ಪದವು ತಿಳಿಯದಾದೆಯ ||
ನೃಪಕುಮಾರ ತಾಮಸದಲಿ ಸೃಷ್ಟಿಗೊಂಡನು | ಮತ್ತೆ |
ಸಫಲವಾಯ್ತು ಶಾಪವಾಕ್ಯವವನೆ ಹಿರಿಯನು || 157 ||
ಋಷಿಯ ವಿದ್ಯೆ ಬ್ರಹ್ಮ ಬಲವು ನೃಪತಿಗಿರುವುದು | ಬರದೆ |
ಅಸುರ ವೃತ್ತಿ ಬ್ರಹ್ಮದ್ವೇಷ ಶಿಕ್ಷೆ ಸಾಗದು ||
ವಸುಮತೀಶನಳಿವಸಾಧ್ಯ ತಪ್ಪು ಘಟಿಸದೆ | ನೀನು |
ವ್ಯಸನ ಬಿಟ್ಟು ಕಾಯಬೇಕು ಕಾಲ ಪಕ್ವಕೆ || 158 ||

**ದ್ವಿಪದಿ**
ಸುರಪನಂ ಬೀಳ್ಗೊಟ್ಟು ಹರಿಯು ಯೋಚಿಸಿದ |
ದೊರೆಯ ಭಾವಕೆ ಹೇತು ಮುನಿಮತಿಯ ಕ್ರೋಧ || 159 ||
ಮುನಿಯ ಕೆಣಕದ ಹೊರತು ದೋಷಿಯಲ್ಲವನು |
ದಿನವದೇ ಬರಲಲ್ಲಿಯನಕ ಕಾಯುವೆನು || 160 ||
ವೈಭವದ ವೈವಾಹ ವಿಜಯ ವಿಭ್ರಮದಿ |
ಭೂಭುಜಂ ರಾಜ್ಯವಾಳಿದನು ಸಂಭ್ರಮದಿ || 161 ||
ಪ್ರಭವಂ ಸುದರ್ಶನನು ಸುತರಾದರವಗೆ |
ವಿಭವದಿಂ ಸಂಸಾರ ಸೊಗದ ಮಡುವಾಗೆ || 162 ||

**ಮಧ್ಯಮಾವತಿ - ತ್ರಿವುಡೆ**
ವೇದ ವಾಙ್ಮಯ ವಾರ್ಧಿ ಸತ್ಯದ |
ಶೋಧಕನು ಸಚ್ಛಾತ್ರ ಶರಧಿಯು |
ಸಾಧಕಾಂಬುಧಿ ಚಂದ್ರ ತತ್ತ್ವ ಸು |
ವಾದಿ ಪಾರಾವಾರನು | ಗೌರಮುಖನು || 163 ||
ಶಿಷ್ಯವೃಂದವ ಸಲಹಿ ಕಲಿಸುತ |
ನಿಶ್ಚಯಿಸಿದನು ಲೋಕ ಮಂಗಲ |
ವಿಶ್ವ ಮೂರ್ತಿಯನೊಲಿಸಲೆಂದು ತ |
ಪಶ್ಚರಿಯದೊಳಗೀರ್ದನು | ಯೋಗಿವರನು || 164 ||

**ಶಂಕರಾಭರಣ - ರೂಪಕ**
ಹರಿಯೆ ಶರಣು ಲೋಕವಂದ್ಯ |
ಸಿರಿಯ ರಮಣ ಶರಣ ರಕ್ಷ |
ಪರಮ ಪುರುಷ ಮುಕುತಿದಾತ | ಕರುಣಿ ರಕ್ಷಿಸು ||
ಧರೆಯ ಶಾಂತಿ ಚಿರಗೊಳಲ್ಕೆ |
ನಿರತ ವೇದವಿದ್ಯೆಯುಳಿವಿ |
ನರಿವಿಗಾಗಿ ಬೇಡುತಿರುವೆ | ಪೊರೆಯೊ ಶ್ರೀಶನೆ || 165 ||

ಒಲಿದು ಬಂದ ಹರಿಯು ಮುನಿಯ |
ನೆಲೆಗೆ ಮೆಚ್ಚಿ ಗೌರಮುಖನೆ |
ತಿಳುಹು ಕಷ್ಟವೇನು ತಪದಿ | ನಿಲಲು ಕಾರಣ ||
ಬೆಳಕ ಜಗಕೆ ತೋರ್ವ ನಿನ್ನ |
ಒಳಗ ಪೇಳೆನಲ್ಕೆ ನಮಿಸಿ |
ನಳಿನನೇತ್ರನೊಡನೆ ಕೇಳ್ದ | ನೊಲವಿನಿಂದಲಿ || 166 ||

**ಕೇದಾರಗೌಳ - ಅಷ್ಟ**
ಲೋಕ ಕಲ್ಯಾಣಾರ್ಥ ಕೈಕೊಂಡೆ ಯಜ್ಞವ |
ಶ್ರೀಕರ ಕರುಣೆದೋರಿ ||
ಬೇಕಾದ ಪರಿಕರ ಕೈಕೂಡುವಂದದಿ |
ನೀ ಕೃಪೆದೋರಬೇಕು || 167 ||
ಕಂತು ಜನಕನಿತ್ತು ಚಿಂತಾಮಣಿಯ ಪೇಳ್ದ |
ಚಿಂತಿತ ಫಲವೀವುದು ||
ಸಂತತದಿಂ ಪೂಜಿಸಂತರಂಗದಿ ಕರೆ |
ಯಂತರಾಯವು ಬಂದರೆ || 168 ||

**ಸೌರಾಷ್ಟ್ರ - ತ್ರಿವುಡೆ**
ಚಕ್ರವರ್ತಿತ್ವವನು ಸಾಧಿಸೆ |
ವಿಕ್ರಮಾರ್ಜಿತ ಸತ್ವನಿಂ ಭೂ|
ಚಕ್ರ ಸಂವೃದ್ಧಿಯಲಿ ಮೆರೆದುದು | ಸಕ್ರಮದಲಿ || 169 ||
ಅರಸನೊಡ್ಡೋಲಗದೊಳೊಪ್ಪಿರೆ |
ಚರಣಕೆರಗುತ ವನದ ಚಾರರು |
ಒರೆದರಾ ಖಗಮೃಗಗಳುಪಟಳ | ದಿರವನೆಲ್ಲ || 170 ||

**ಮುಖಾರಿ - ಏಕ**
ಅಡ್ಡ ಬಿದ್ದೇವು ಪಾದಕ್ಕೊಡೆಯ | ಸವಾರಿ ಬಂದು |
ದೊಡ್ಡದೊಂದುಪಕಾರ ಮಾಡ್ಬೇಕು ಜೀಯ ||ಅಡ್ಡ||
ಸೊಡ್ಡಿಲಿ ಬಡಿಯುವ | ದೊಡ್ಡಾನೆಗಳೆ |
ಮೃಡ್ಡಾಡಿಸಿದವು | ಗುಡ್ಡದ ಬುಡದೊಳ |
ಗಡ್ಡವ ಕಟ್ಟುತ | ದೊಡ್ಡದು ಬಗ್ಗವು |
ಗಿಡ್ಡನ ಹಂದಿಯು | ಹೆಡ್ಡರಾದೆವೈ || ಅಡ್ಡ || 171 ||
ಕಪ್ಪಿನ ಕರಡಿಯೊಂದು ಬಂತು | ನಿದ್ದೆಯೊಳಿದ್ದ |
ನ್ನಪ್ಪನ ಕಣ್ಣು ಕಿತ್ತು ತಿಂತು ||
ಸೊಪ್ಪಿನ ಮರೆಯೊಳು | ಚಿಪ್ಪಿನ ಮೈಮೃಗ |
ಅಪ್ಪಳಿಸಿವೆ ಮೇ | ಲಿಪ್ಪ ಹದ್ದುಗಳು |
ಸೊಪ್ಪು ಹಾಕುವೆ | ಮೃಪ್ಪನೆ ನೀವ್ ಬಂ |
ದೊಪ್ಪಗೊಳಿಸಿ ನಾ | ವ್ಪಪ್ಪರಾದೆವೈ || ಅಡ್ಡ || 172 ||

**ಭಾಮಿನಿ**
ಕೆಟ್ಟೆನೆಂದಳುವವರ ದಿಟ್ಟಿಸಿ |
ಕೊಟ್ಟನಭಯವ ಸೃಷ್ಟಿಪತಿ ತಾ |
ನಟ್ಟುಳಿಯ ನಿಲಿಸುವೆನು ಬಹೆನೆಂದವರ ಕಳುಹಿಸುತ ||
ಗಟ್ಟಿಗರ ಬರಹೇಳಿ ಬೇಟೆಗೆ |
ಥಟ್ಟನೀಕ್ಷಣ ಶಬರರೆನಲಿವ |
ರೊಟ್ಟುಗೂಡುತ ಬಂದು ನಮಿಸಿತು ಬೇಡ ಪರಿವಾರ || 173 ||
ಹರುಷದಿಂ ಮನ್ನಿಸುತ ಶಬರರ |
ನರಪತಿಯು ಪೊರವಂಟ ಬೇಟೆಗೆ |
ತುರಗವೇರುತ ಬಳಸಿ ಬಂದಿತು ಸೈನ್ಯ ಪರಿವಾರ ||
ಹಿರಿಕಿರಿಯರೊಂದಾಗಿ ಬಲೆ ಬಲ |
ಶರ ಶುನಕ ಸೋವರಿವ ಪರಿಣತ |
ರೆರಕಗೊಳೆ ವನದೇಶದೊಳು ನಡೆತಂದನಾ ನೃಪತಿ || 174 ||

**ಮುಖಾರಿ - ಏಕ**
ಮೃಗಯಾ ವಿಹಾರಕ್ಕೈತಂದ | ಸಂತಸದಿಂದ |
ಮೃಗಯಾವಿಹಾರಕ್ಕೈತಂದ ||ಪ||
ಅಗಣಿತ ಬೇಡರ ರಗಳೆಯ ಬೊಬ್ಬೆ ಸೊ |
ಣಗಗಳ ಭೂ ಬೀಟ್ಬೊಗೆದರೀಟಿಗಳ |
ಸಿಗಿದರು ಸಿಂಗವ | ಬಗೆದರು ಬಗ್ಗವ |
ಬಗೆ ಬಗೆ ಬೇಟೆಯ ಸೊಗಮಂ ಸವಿಯುತ || ಮೃಗಯಾ || 175 ||

**ವಾರ್ಧಕ**
ನಳನಳಿಸಿ ಬೆಳೆದ ತಂಪೆರೆವ ತರುಲತೆಗಳಿಂ |
ಜುಳುಜುಳಿಪ ನದಿ ಶುಭ್ರ ಸಲಿಲ ಪುಷ್ಕರಿಣಿಯಿಂ |
ಕಲರವಂಗಳ ಪಕ್ಷಿ ಕುಲವೈರವರಿಯದ ಮೃಗಾಳಿಯಿಂ ರಂಜಿಸುತಿಹ ||
ಫಲಪುಷ್ಪ ಭರಿತಮಾದಾಶ್ರಮದಿ ಗೌರಮುಖ |
ಹಲವು ಶಿಷ್ಯರ್ ಸಹಿತ ವೇದ ವಿದ್ಯಾಪರನು |
ನೆಲೆಗೊಂಡಿರಲ್ ನಿತ್ಯ ಸತ್ಯಮಂ ಕೀರ್ತಿಸುತ ಸಕಲಾಗಮಜ್ಞ ಮುನಿಪ || 176 ||

**ಮಧುಮಾಧವಿ - ತ್ರಿವುಡೆ**
ಧರಣಿಪತಿ ಪರಿವಾರ ಸಹಿತಲಿ |
ಬರುತ ಕಂಡನು ಮುನಿಗಳಾಶ್ರಮ |
ಪರಕೆಯಂಗೊಂಡೈದೆ ಶುಭವೆಂ |
ದರಿತು ಪೊಕ್ಕನು ವಹಿಲದಿ || 177 ||
ಮುನಿಯ ಪದದಲಿ ಚಾಚಿ ಮಸ್ತಕ |
ವಿನಯದಿಂ ಪರಿವಾರ ಸಹ ಬಂ |
ದನನು ಕಾಣುತ ಹರುಷ ಮೆರೆಯಲು |
ಘನತೆಯಿಂದುಪಚರಿಸಿದ || 178 ||

**ಮಧುಮಾಧವಿ - ಅಷ್ಟ**
ಬರವಿದೇನಯ್ಯ ಭೂಪ | ಭೂಚಕ್ರೇಶ |
ಬರವಿದೇನಯ್ಯ ಭೂಪ ||
ಧರಣಿಪತಿ ರಾಜ್ಯಾಂಗ ಕ್ಷೇಮವೆ |
ಪುರವು ಪ್ರಜೆಗಳು ಸುಖವೆ ಪೇಳೈ |
ತೆರಳಿ ಬಂದಿಹುದೇತಕರಿಯೆನು |
ಹರುಷದಿಂ ವಿಶ್ರಮಿಸಿಕೊಂಬುದು || ಬರವಿದೇನಯ್ಯ || 179 ||
ಮುನಿಯೆ ಸುಕ್ಷೇಮಿಗಳು | ಬೇಟೆಯನಾಡಿ |
ವನದಿ ಮುಂಬರಿದೈದಲು ||
ಸನಿಹದೊಳು ತಮ್ಮಾಶ್ರಮವ ಕಂ |
ಡೆನು ಪರಕೆಯಂಗೊಂಡು ಪೋಗುವ |
ಮನದೊಳೈದೆನು ಪಡೆಗಳನು ನಾ |
ಸನಿಹದೊಳಗಿರಿಸುತ್ತ ಬಂದೆನು || 180 ||

**ಸಾಂಗತ್ಯ - ರೂಪಕ**
ಸಂತಸವಾಂತೆ ಭೂಕಾಂತ ಬಂದುದಕಿಂತು |
ಸಂತು ಮಧ್ಯಾಹ್ನದ ಸಮಯ ||
ಎಂತಾಯಾಸವೊ ಕರೆ ನಿಮ್ಮವರನು ಹಸಿ |
ವಂ ತಣಿಸುವುದು ಸದ್ಧರ್ಮ || 181 ||
ಏನ ಪೇಳ್ವಿರಿ ನಮ್ಮ ಸೇನೆಯಕ್ಷೋಹಿಣಿ |
ಗೇನನ್ನಪಾನ ಖಾದ್ಯಗಳು ||
ಮೌನಿಯೆ ತಮ್ಮಾಶ್ರಮದೊಳೆಂತೀಗಿದು ಸಾಧ್ಯ |
ಮಾನಿತನಾದೆ ನಾ ಬರುವೆ || 182 ||
ತಿಳಿಯದ ಮಾತಲ್ಲ ನಿಳಯವು ಬಹುದೂರ |
ಬಳಲಿದರೆಲ್ಲರೆಂದರಿತೆ ||
ಜಳಕವ ಹೊಳೆಗಿಳಿದೆಲ್ಲ ಪೂರೈಸಿರಿ |
ಘಳಿಲನೆ ಸಿದ್ಧ ಭೋಜನವು || 183 ||
ಅರಸನಿಗಾದರು ಸರಸದ ಮಾತಲ್ಲ |
ನೆರವಿಯು ಬಹುದೊಡ್ಡದಿಹುದು ||
ಪರಿತವಣೆಯು ಮತ್ತೆ ಪರಿಚರ್ಯೆ ಕಷ್ಟವು |
ತ್ವರಿತದ ಸಿದ್ಧತೆ ಕಷ್ಟ || 184 ||

**ಸೌರಾಷ್ಟ್ರ - ತ್ರಿವುಡೆ**
ಎಂತೊ ಗೈಯುವೆನರಸ ನಾನೇ |
ನಿಂತು ನಡೆಸುವ ಕಾರ್ಯವೀಕ್ಷಿಸು |
ಸಂತಸದೊಳುಂಡುಟ್ಟು ಪೋಗಿರಿ | ಚಿಂತೆಬೇಡ || 185 ||
ಮನದ ಸಂಶಯ ಮುನಿಯ ದೃಢತೆಯ |
ಜನಪನಾಶ್ಚರ್ಯದಲಿ ಕೇಳುತ |
ವನಧಿಯಲಿ ಶುಚಿಗೊಳ್ಳಲಿತ್ತನು | ಅನುಮತಿಯನು || 186 ||

**ಭಾಮಿನಿ**
ಗೌರಮುಖಿ ಚಿಂತಾಮಣಿಯ ಮನ |
ವಾರೆ ಪೂಜಿಸಿ ಭಕ್ತಿ ಭಾವದಿ |
ಭೂರಮಣನುರು ಬಳಗಕುಣಬಡಿಸುವರೆ ಪ್ರಾರ್ಥಿಸಲು ||
ಭೂರಿಭೋಜನ ಸಾಲುಚಪ್ಪರ |
ಬೇರೆಬೇರೆತಿರುಚಿಯ ಸೋಪ |
ಸ್ಕಾರದೆಡೆಗಳು ಸಿದ್ಧವಾದವು ಬಡಿಸುವರು ಸಹಿತ || 187 ||
ಹಂಡೆಯಲಿ ತುಂಬಿರುವ ಪಾಯಸ |
ಮಂಡಳಿಸಿ ಪರಿಮಳಿಪ ಭಕ್ಷ್ಯಗ |
ಳುಂಡೆ ಹೋಳಿಗೆ ಚಟ್ನಿ ಚಿತ್ರಾನ್ನಗಳು ಮೊಸರನ್ನ ||
ಮಂಡಿಗೆಯು ಕಾಯ್ರಸ ರಸಾಯನ |
ಬೆಂಡೆ ಮತ್ತಲಸಂಡೆ ಪಲ್ಯವು |
ಹಿಂಡುಹಿಂಡದನುಂಡು ಕುಣಿದುದು ನೃಪತಿ ಬೆರಗಾದ || 188 ||

**ಸೌರಾಷ್ಟ್ರ - ಅಷ್ಟ**
ಉಂಡು ತಣಿದುದೆನ್ನ ದಂಡು ಸಂತೃಪ್ತವು | ಮೌನಿವರ್ಯ || ಇದ |
ಕಂಡು ನಾ ಬೆರಗಾದೆ ರಾಜವೈಭವದೂಟ | ಮೌನಿವರ್ಯ || 189 ||
ನಂಬುವ ಹಾಗಿಲ್ಲ ನಂಬದೆ ವಿಧಿಯಿಲ್ಲ | ಎಂತು ಸಾಧ್ಯ || ತಪ |
ವೆಂಬುದು ನಿಮಗನ್ನ ವ್ರತನಿಯಮದ ಬನ್ನ | ಎಂತು ಸಾಧ್ಯ || 190 ||
ಉಣಿಸಿದ ಪರಿಯೆಂತು ಮಣಿದು ಬೇಡುವೆ ಪೇಳಿ | ಮೌನಿನಾಥ || ಮಾಯ |
ವೆನುವಂತೆ ಕಂಡಿತು ಕ್ಷಣಿಕವೊ ಸತ್ಯವೊ | ಮೌನಿನಾಥ || 191 ||

**ಭಾಮಿನಿ**
ಆದರಾಲಿಸು ಭೂಪ ಪೂರ್ವದಿ |
ಶ್ರೀಧವನ ಮೆಚ್ಚಿಸುತ ಪಡೆದೆನು |
ಸಾಧನೆಯ ಚಿಂತಾಮಣಿಯ ಯಜ್ಞಾರ್ಥವೀದಿನದಿ ||
ಆದರಿಸಬೇಕೆಂದು ಬೇಡ |
ಲ್ಕಾದುದೀ ಪರಿತವಣೆ ದೈವ ಪ್ರ |
ಸಾದವಿದು ಶುಭವಹುದು ಪೋಗೆನೆ ನೃಪನ ಮನ ಕಲಕೆ || 192 ||

**ಸುರುಟಿ - ಏಕ**
ಮುನಿ ನುಡಿದುದ ಕೇಳಿ | ಬೆರಗಿಂ |
ಜನಪತಿ ಮುದ ತಾಳಿ ||
ಮಣಿಯ ಮಹಿಮೆಗೀ | ಘನಶಕ್ತಿಗಳಿರೆ |
ಮನುಜರ ಕಷ್ಟವ | ನನುದಿನ ಕಳೆವುದು || 193 ||
ರಾಜಭವನದಲ್ಲಿ | ರಕ್ಷಿಸೆ |
ನೈಜತನದೊಳಲ್ಲಿ ||
ಭೋಜನವಿತ್ತ ಸು | ಯೋಜಿತ ಮಣಿ ಜಗ |
ತೀಜನಕುಪಕೃತಿ | ಸಾಜವು ಪುಣ್ಯವು || 194 ||

**ಸೌರಾಷ್ಟ್ರ - ತ್ರಿವುಡೆ**
ಹರಿಯನುಗ್ರಹದಿಂದ ಯಜ್ಞಕೆ |
ದೊರೆತ ಮಣಿಯನ್ಯರಿಗೆ ಕೊಡೆನೈ |
ಪರಮ ಪುರುಷನ ದಿವ್ಯ ರಕ್ಷಣೆ | ಇರುವ ಮಣಿಯು || 195 ||
ಸ್ವಾಮಿ ನಿಮ್ಮಾಶ್ರಮಕೆ ನೀಡುವೆ |
ಭೂಮಿ ಸಾಸಿರ ಧೇನು ದ್ರವ್ಯವ |
ಕ್ಷೇಮವೀ ಮಣಿ ರಾಜಕಾರ್ಯಕೆ ಹೋಮಕೇಕೆ || 196 ||
ಮನುಜ ಮಾತ್ರರ ಶಕ್ತಿಗಿದೆ ಮಿತಿ |
ಜನಪ ನಾರಾಯಣ ಪ್ರದತ್ತವ |
ನೆಣಿಸದಿರು ತೃಣವೆಂದು ನೀಡೆನು | ವಿನಿಮಯಕ್ಕೆ || 197 ||

**ಮಾರವಿ - ಏಕ**
ಗೆದ್ದಿಹೆ ಲೋಕವ ವೃದ್ಧಶ್ರುವ ಸಹ |
ಬಿದ್ದಿಹ ಪಾದದಲಿ ||
ಹೊದ್ದಲು ನೀತಿಯೊಳಿದ್ದುದ ಪೇಳ್ವೆಯ |
ಬುದ್ಧಿಯ ರಾಜನಲಿ || 198 ||
ಬಡಮುನಿ ಮಣಿಯಂ ಪಡೆಯದುಳಿವೆನೇ |
ಕೊಡು ಸಾಮದೊಳುಳಿವೆ ||
ತಡೆಯುವರಾರೈ ಪೊಡವಿಯೊಳೆನ್ನನು |
ಜಡಜೋಗಿಯೆ ಕೆಡುವೆ || 199 ||

ದಣಿದವರುಣ್ಣುವ ಮನದೊಳಗುಣಿಸ |
ಲ್ಕೆಣಿಸಿದೆ ದ್ರೋಹವನು ||
ಮಣಿ ಕೊಡೆ ಸಾರ್ದೆನು ಬಿಡು ದುರ್ಮೋಹವ |
ನೆಣಿಸದೆ ನಡೆ ನೀನು || 200 ||

**ಭಾಮಿನಿ**
ಕ್ರೋಧದಿಂದುರಿದೆದ್ದನಾ ನೃಪ |
ಸೇದುವೆನು ನಿನ್ನಾಶ್ರಮವನೆಲೆ |
ಭೂದಿವಿಜ ಧಿಕ್ಕರಿಸಿ ಚಕ್ರೇಶ್ವರನ ಬೇಡಿಕೆಯ ||
ಸಾಧಿಸುವ ದುಷ್ಫಲವ ತೋರ್ಪೆನು |
ಮೋದದಿಂ ನೀ ಮಣಿಯ ಕೊಡು ಕೊಡು
ಭೇದ ಬುದ್ಧಿಯನೆಣಿಸಲೀಕ್ಷಣ ಸುಡುವೆನಾಶ್ರಮವ || 201 ||

**ಕಂದ**
ದುಷ್ಟನ ಮನಮಂ ತಿದ್ದಲು |
ಕಷ್ಟಮೆನುತ್ತರಿತು ಮುನಿಪ ಹರಿಯಂ  ನೆನೆದಂ ||
ಇಷ್ಟಾರ್ಥಪ್ರದ ಪೊರೆ ಸಂ |
ಕಷ್ಟವ ಕಳೆದೀಗಲೆಂದು ಯೋಗದಿ ನಿಂದಂ || 202 ||

**ಸೌರಾಷ್ಟ್ರ - ತ್ರಿವುಡೆ**
ಅರಸನಾಜ್ಞೆಯೊಳೈದೆ ಸೈನ್ಯವು |
ಭರದೊಳಾಶ್ರಮ ಸುತ್ತುವರಿಯುತ |
ಪರಿಪರಿಯ ನಿಶಿತಾಯುಧಂಗಳ | ಧರಿಸಿ ಮುತ್ತೆ || 203 ||
ಬೆದರೆ ವಟುಗಣ ದೌಷ್ಟ್ಯದರ್ಪಕೆ |
ಕುದಿದು ದುರ್ಜಯನುರಿವ ಶರಗಳ |
ದೊರೆಯ ಕೆಣಕಿದ ಫಲವ ತೋರುವೆ | ಪೊರಡಿರೆಂದ || 204 ||
ಯೋಗಿವರನಿಂ ಪೊರಟುದಾಕ್ಷಣ |
ಮೈಗರೆದು ದಿವ್ಯಾಗ್ನಿ ಸೈನ್ಯವ |
ತಾಗಿ ಸುಟ್ಟುದು ಕೈದು ಕರಟಲು | ಕೂಗುತುರುಳೆ || 205 ||

**ವಾರ್ಧಕ**
ತರಿವೆನೀ ಮುನಿಯನೆಂದುಜ್ವಲಿಸಿ ತಾಮಸದಿ |
ಕರೆಸಿದಂ ಚತುರಂಗ ಸೈನ್ಯಮಂ ದುರ್ಜಯಂ |
ಧರಣಿ ಕಂಪಿಸಲಾಶ್ರಮವ ಮುತ್ತಿ ಕೋಲಾಹಲಂಗೈದುದೇನೆಂಬೆನು ||
ಮೆರೆವಶ್ವಗಜಸೈನ್ಯ ಪರಿಪರಿಯ ಸೈನಿಕಂ |
ಶರವೀಟಿ ಖಡ್ಗ ಕುಂತಲ ಗದಾದಿಗಳಿಂದ |
ಅರಿವೆನೆಂದೈತರಲ್ ಯೋಗನಿಷ್ಠನ ಕರೆಗೆ ಹರಿ ಬಂದ ಗರುಡರಥನು || 206 ||

**ಭೈರವಿ - ಏಕ**
ನಿಲ್ಲಿರಿಯಾಶ್ರಮದಲ್ಲಿ | ಭೂ |
ವಲ್ಲಭನೈತಂದಿಲ್ಲಿ ||
ಸಲ್ಲದ ನಡೆ ನಿನಗೇಕೊ | ನಡೆ |
ಕ್ಷುಲ್ಲಕ ಕಾರ್ಯವು ಸಾಕೊ || 207 ||
ಹರಿ ನೀ ಬಂದರು ಬಿಡೆನು | ಭೂ |
ವರನಹೆ ಸಾಹಸಿಯಹೆನು ||
ದೊರೆತನ ಧಿಕ್ಕರಿಸಿದಗೆ | ಏ |
ನ್ನಿರಮಂ ತೋರುವೆನವಗೆ || 208 ||
ಮನುಜನ ದೊರೆತನವೆಷ್ಟು | ದಿನ |
ವೆನುವುದರಿತೆ ಮತಿಗೆಟ್ಟು ||
ಮಣಿಯ ಬಯಕೆಯಿಂ ಮುನಿಯ | ಕೆಡು |
ಕನೆ ಕೆಣಕಿದೆ ಸಂಯಮಿಯ || 209 ||
ಲೋಕದ ವ್ಯವಹಾರವಿದು | ನೀ |
ವೈಕುಂಠಕೆ ಮರಳುವುದು ||
ಸಾಕೆನಿಸುವೆ ಯುದ್ಧದಲಿ | ಶರ |
ನೀಕದ ಕೈಬಲ್ಮೆಯಲಿ || 210 ||

**ಭಾಮಿನಿ**
ವರಸುದರ್ಶನ ಚಕ್ರಮಂ ಶ್ರೀ |
ಹರಿಯು ಧರಿಸುತಲಿತ್ತನಪ್ಪಣೆ |
ತಿರುತಿರುಗಿ ಚಿಮ್ಮಿಸುತಲಗ್ನಿಯ ಸುಟ್ಟು ಸೇನೆಯನು ||
ತರಿದು ಕೆಡಹಿತು ಶೇಷವಿರದಂ |
ತರಸಸಹ ನಿಮಿಷದಲಿ ಕಾಣುತ |
ಸುರರು ಪೂಮಳೆಗರೆಯಲೆಚ್ಚತ್ತನು ಮುನೀಶ್ವರನು || 211 ||

**ನವರೋಜು - ಆದಿ**
ನೋಡಿದನಾಕ್ಷಣ ಹರಿಯ | ಒಳ |
ಗಾಡಿದ ದಿವ್ಯದ ನಿಧಿಯ ||
ಹೂಡುತ ರೂಢಿಯೊಳ್ಪನುವ | ಕೊಂ |
ಡಾಡಿದ ಬೇಡಿದ ವಿಭುವ || 212 ||
ರಕ್ಷಿಸು ಸರ್ವೇಕ್ಷಣನೇ | ಜಗ |
ರಕ್ಷಕ ಲಕ್ಷ್ಮೀವರನೆ ||
ಈಕ್ಷಿಪೆನೆಂತೀ ಪರಿಯ | ಚ |
ರ್ಮಾಕ್ಷಿಗೆ ತೀರದು ಜೀಯ || 213 ||

**ಮೋಹನ - ಆದಿ**
ತೋಷವಾಯಿತು ಮುನಿಯೆ | ದೇವರ್ಕಳೊಂ |
ದಾಸೆ ತೀರಿದುದರಿಯೆ ||
ವಾಸವ ದೋಷದಿಂ | ಘಾಸಿಗೊಂಡಿರೆ ಪೇಳ್ದ |
ಭೂಸುರ ವೈರದಿಂ | ನಾಶಗೊಳ್ಳುವನೆಂದು || ತೋಷ || 214 ||
ವೈಮನಸ್ಯದಿ ನೃಪನು | ಬ್ರಾಹ್ಮಣದ್ವೇಷ |
ತಾಮಸಮನನಾದನು ||
ನೇಮಿಸೆ ಚಕ್ರವು ನಿಮಿಷದಿ ಕಡಿದುದು |
ನೈಮಿಷಾರಣ್ಯವೆಂದತಿ ಖ್ಯಾತವಾಗಲಿ || 215 ||
ಯಾಗಯೋಗವು ಯಜ್ಞವು | ಪೌರಾಣಿಕ |
ರಾಗಮ ಸುಜ್ಞಾನವು ||
ಸಾಗಲಿ ನಿತ್ಯವು ಜ್ಞಾನ ಮಹಾಸತ್ರ |
ವಾಗುವುದೀನೆಲ ಮೋಕ್ಷಗಮನಧಾಮ || 216 ||

**ಭಾಮಿನಿ**
ಮಂತ್ರಮೂರ್ತಿಯನಂತನಾಮನೆ |
ಚಿಂತಿತಾರ್ಥವನೀವ ಸರ್ವಸ್ವ |
ತಂತ್ರ ಲೋಕನಿಯಂತ್ರಣನೆ ಸಲಹೆಂದು ಪದಕೆರಗೆ ||
ಸಂತವಿಸಿ ಪರಸುತ್ತ ಶ್ರೀಹರಿ |
ದಂತಿವಾಹನಗಿತ್ತು ಸ್ವರ್ಗವ |
ತಾಂ ತೆರಳೆ ಸುರರೆಲ್ಲ ಕರೆದರು ಮಂಗಳದ ಮಳೆಯ || 217 ||

**ಬೇಗಡೆ - ಏಕ**
ವಂದಿಸುವೆ ಜಗದಂಬೆ ಭ್ರಮರಾಂಬೆ | ಲೋಕವನು ರಕ್ಷಿಸೆ |
ನಂದಿನೀತಟವಾಸೆ ದುರ್ಗಾಂಬೆ ||
ಕುಂದೆ ಜಗ ಜಾಬಾಲಿಶಾಪವ |
ಹೊಂದಿ ಧರೆಗೈತಂದ ಸುರಭಿಯ |
ನಂದನೆಯ ಮೊರೆಗರುಣ ದೈತ್ಯನ |
ಕೊಂದು ಸಂತಸದಿಂದ ನಿಂದಳೆ || ವಂದಿಸುವೆ || 218 ||

**ಸಾಂಗತ್ಯ - ರೂಪಕ**
ನಂದಿನೀ ತಟದಲ್ಲಿ ನಿಂದು ಲೋಕವ ಕಾಯ |
ಲೆಂದುದ್ಭವಿಸಿದ ಭ್ರಾಮರಿಗೆ ||
ಕೊಂದು ದೈತ್ಯರ ಭಕ್ತವೃಂದೋದ್ಧರಣ ಗೈದು ।
ಇಂದುಕಾಂತಿಯೊಳೊಪ್ಪುವಳಿಗೆ ||
ಜಯಮಂಗಲಂ ನಿತ್ಯ ಶುಭಮಂಗಲಂ || 219 ||

*****ಶುಭಂ*****

# ಕೃತಜ್ಞತೆಗಳು

**ಅಂತರಜಾಲ ಪ್ರಕಾಶನ ಪ್ರಾಯೋಜಕರು:** ಕರ್ನಾಟಕ ಯಕ್ಷಗಾನ ಅಕಾಡೆಮಿ, ಕರ್ನಾಟಕ ಸರ್ಕಾರ

**ಮೂಲ ಪ್ರಕಾಶಕರು:** ಸದಾನಂದ ಅಸ್ರಣ್ಣ ಪ್ರಕಾಶನ, ಕಟೀಲು, ದಕ್ಷಿಣ ಕನ್ನಡ ಜಿಲ್ಲೆ

**ಪ್ರಸಂಗ ಪ್ರತಿ ಆಧಾರ:** ಕವಿಯ ಮೂಲಕೃತಿ

**ಪ್ರಸಂಗ ಪ್ರತಿ ಕೊಟ್ಟವರು:** ಶ್ರೀಧರ ಡಿ. ಎಸ್.

**ಪ್ರಸಂಗ ಪ್ರತಿ ಒದಗಣೆಗೆ ಸಹಕಾರ:** ಶ್ರೀಧರ ಡಿ. ಎಸ್., ಸದಾನಂದ ಅಸ್ರಣ್ಣ ಪ್ರಕಾಶನ, ಕಟೀಲು, ದಕ್ಷಿಣ ಕನ್ನಡ ಜಿಲ್ಲೆ

**ಅಂತರಜಾಲ ಪ್ರತಿ ಬರವಣಿಗೆ:** ಶ್ರೀಧರ ಡಿ. ಎಸ್.

**ಅಂತರಜಾಲ ಪ್ರತಿ ತಿದ್ದುಪಡಿ:** ಶ್ರೀಧರ ಡಿ.ಎಸ್., ಗಿಂಡೀಮನೆ ಮೃತ್ಯುಂಜಯ

**ಅಂತರಜಾಲ ಪ್ರತಿ ಉತ್ಪಾದನೆ:** ರವಿ ಮಡೋಡಿ, ನಟರಾಜ ಉಪಾಧ್ಯ, ಅಶ್ವಿನಿ ಹೊದಲ

**ಅಂತರಜಾಲ ಪ್ರತಿ ಪ್ರಕಾಶನ:** ರವಿ ಮಡೋಡಿ, ಡಾ. ಪ್ರದೀಪ ಸಾಮಗ, ನಟರಾಜ ಉಪಾಧ್ಯ